ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ



ಮಾಸಪತ್ರಿಕೆ
ಸಂಪುಟ 3, ಸಂಚಿಕೆ 5, ಮಾರ್ಚ್ 2025
SHRIDEVI ANTARANGA
Monthly Magazine


ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಬಜೆಟ್ ಆಶಯಗಳು ವಾಸ್ತವದಲ್ಲಿ ಕಾರ್ಯಗತಗೊಳ್ಳಲಿ



"ಆಯವ್ಯಯ ಎನ್ನುವುದು ಕೂಡಿಕಳೆಯುವ ಅಂಕಿಸಂಖ್ಯೆಗಳ ನಿರ್ಜೀವ ಆಟವಲ್ಲ. ಏಳುಕೋಟಿ ಜನರ ಬದುಕಿನ ಭರವಸೆಯ ಉಸಿರು" ಎನ್ನುವ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು 2025–26ನೇ ಸಾಲಿಗೆ ₹ 4.09 ಲಕ್ಷ ಕೋಟಿ ಗಾತ್ರದ ರಾಜ್ಯ ಬಜೆಟ್ ಮಂಡಿಸಿದ್ದಾರೆ. ಇದು ಕಳೆದ ವರ್ಷದ ₹ 3.71 ಲಕ್ಷ ಕೋಟಿ ಗಾತ್ರದ ಬಜೆಟ್‌ಗೆ ಹೋಲಿಸಿದರೆ ಶೇ 10.30ರಷ್ಟು ಹೆಚ್ಚಾಗಿದೆ. ಸಿದ್ದರಾಮಯ್ಯ ಅವರು 1995ರಲ್ಲಿ ಮೊದಲ ಬಜೆಟ್ ಮಂಡಿಸಿದಾಗ ರಾಜ್ಯ ಬಜೆಟ್‌ನ ಗಾತ್ರ ₹ 12,000 ಕೋಟಿ ಇದ್ದು ಈಗ 30 ವರ್ಷಗಳಲ್ಲಿ ಸುಮಾರು 35ಪಟ್ಟು ಹೆಚ್ಚಳವಾಗಿರುವುದು ರಾಜ್ಯದ ಆರ್ಥಿಕತೆಯ ಬೆಳವಣಿಗೆಯನ್ನು ಸೂಚಿಸುತ್ತಿದೆ. ಈ ವರ್ಷದ ಮುಂಗಡಪತ್ರ ಕೂಡ ಹೋದ ವರ್ಷದಂತೆಯೇ ಕೊರತೆಯ ಬಜೆಟ್, ಅಂದರೆ ರಾಜಸ್ವ ಆದಾಯಕ್ಕಿಂತ ಹೆಚ್ಚು ಖರ್ಚಿನಿಂದ ಕೂಡಿದ್ದಾಗಿದೆ.

'ನಾಡು ಕಟ್ಟುವ ಪ್ರಕ್ರಿಯೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಇಟ್ಟಿಗೆಗಳನ್ನು ಸುವ್ಯವಸ್ಥಿತವಾಗಿ ಜೋಡಿಸಬೇಕಿದೆ' ಎಂಬ ಆಶಯ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಆ ದಿಸೆಯಲ್ಲಿ ಅಭಿವೃದ್ಧಿಯ ಆರು ಆಯಾಮಗಳನ್ನು ಗುರುತಿಸಿದ್ದಾರೆ. ಕಲ್ಯಾಣ ಕಾರ್ಯಕ್ರಮಗಳು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ, ನಗರಾಭಿವೃದ್ಧಿ, ಹೂಡಿಕೆ ಮತ್ತು ಉದ್ಯೋಗಸೃಷ್ಟಿ ಹಾಗೂ ಆಡಳಿತ ಸುಧಾರಣೆ– ಇವೇ ಆ ಆರು ಆಯಾಮಗಳಾಗಿವೆ.

ಇದರಲ್ಲಿ, ₹ 1.16ಲಕ್ಷ ಕೋಟಿಯನ್ನು ಸಾಲ ಪಡೆಯುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ಇದರಿಂದ ರಾಜ್ಯದ ಒಟ್ಟಾರೆ ಸಾಲದ ಮೊತ್ತವು 2025–26ರಲ್ಲಿ ₹ 7.64ಲಕ್ಷ ಕೋಟಿಗೆ ಏರಿಕೆಯಾಗಲಿದೆ. ಇದು ಸ್ವಲ್ಪ ಮಟ್ಟಿಗೆ ದಿಗಿಲು ಹುಟ್ಟಿಸುವಂತದ್ದೇ. "ಆದರೆ, ನಮ್ಮ ಬಜೆಟ್‌ನ ಗಾತ್ರ ವರ್ಷವರ್ಷವೂ ಏರುತ್ತಿರುವುದರಿಂದ ಅದಕ್ಕನುಗುಣವಾಗಿ ಸಾಲದ ಪ್ರಮಾಣ ಕೂಡ ಹೆಚ್ಚಳವಾಗುತ್ತಿದೆ. ಆದರೆ ಈ ಸಾಲದ ಪ್ರಮಾಣ ವಿತ್ತೀಯ ಶಿಸ್ತಿನ ಪರಿಮಿತಿಯೊಳಗೇ ಇದೆ. ಅಂದರೆ, ಕೇಂದ್ರ ಸರ್ಕಾರದ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಪ್ರಕಾರ, ಸಾಲದ ಪ್ರಮಾಣವು ಜಿ.ಎಸ್.ಡಿ.ಪಿ.ಯ ಶೇ 50ರ ಒಳಗಿರಬೇಕು.

▶▶ 2ನೇ ಪುಟಕ್ಕೆ...

# ಹದಿಮೂರು ರ್‍ಯಾಂಕ್ ಗಳಿಸಿ ಹೊಸಭಾಷ್ಯ ಬರೆದ ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು





▪ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ಸುಮಾರು 12 ವರ್ಷಗಳ ಹಿಂದೆ ಡಾ. ಎಂ. ಆರ್. ಹುಲಿನಾಯ್ಕರ್ ಅವರ ಅವಿರತ ಶ್ರಮ –ಪ್ರಯತ್ನದಿಂದ ಪ್ರಾರಂಭವಾದ ಶ್ರೀದೇವಿ ವೈದ್ಯಕೀಯ ಕಾಲೇಜು ಇಂದು ಹೆಮ್ಮರವಾಗಿ ಬೆಳೆದಿದೆ. ಮೊದಲು ಆಸ್ಪತ್ರೆಯನ್ನು ನಿರ್ಮಿಸಿ ತದನಂತರ ವೈದ್ಯಕೀಯ ಕಾಲೇಜು ಆರಂಭಿಸಿರುವುದು ವಿಶೇಷ. ಈ ಕಾಲೇಜು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಹಾಗೂ ನ್ಯಾಷನಲ್ ಮೆಡಿಕಲ್ ಕಮಿಷನ್ (ರಾಷ್ಟ್ರೀಯ ವೈದ್ಯಕೀಯ ಆಯೋಗ) ಮಾನ್ಯತೆ ಗಳಿಸಿಕೊಂಡಿದೆ. 400ಕ್ಕೂ ಹೆಚ್ಚು ವೈದ್ಯರು, 500 ನರ್ಸ್‌ಗಳು ಹಾಗೂ 500 ಡಿ ಗ್ರೂಪ್ ಸಿಬ್ಬಂದಿ ಸೇರಿದಂತೆ ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಡಾ. ಹುಲಿನಾಯ್ಕರ್ ಅವರ ಮಾರ್ಗದರ್ಶನದಲ್ಲಿ ಶ್ರಮಿಸುತ್ತಿದ್ದಾರೆ. ಶ್ರೀದೇವಿ ಕಾಲೇಜಿಗೆ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ಹದಿಮೂರು ರ್‍ಯಾಂಕ್‌ಗಳು ಪ್ರಾಪ್ತಿಯಾಗಿದೆ. ಪಿಜಿಯಲ್ಲಿ 6, ಯುಜಿಯಲ್ಲಿ 7 ರ್‍ಯಾಂಕ್‌ಗಳು ಬಂದಿವೆ.

ಕಾಲೇಜಿನ ಅಧ್ಯಾಪಕವರ್ಗ ಪ್ರಿನ್ಸಿಪಾಲ್ ಡಾ. ಎಂ.ಎಲ್. ಹರೇಂದ್ರಕುಮಾರ್ ನೇತೃತ್ವದಲ್ಲಿ ಶ್ರಮಿಸಿದ್ದರಿಂದ ಈ ಮಟ್ಟದ ಫಲಿತಾಂಶ ಸಾಧ್ಯವಾಗಿದೆ. ಪ್ರತಿ 6 ತಿಂಗಳಿಗೊಮ್ಮೆ ವಿದ್ಯಾರ್ಥಿಗಳ ಶೈಕ್ಷಣಿಕ ಮೌಲ್ಯಮಾಪನ ಮಾಡಿ, ವಾರ್ಷಿಕ ಪರೀಕ್ಷೆಗೆ ವಿದ್ಯಾಥಿಗಳನ್ನು ಅಣಿಗೊಳಿಸಿದ್ದರು. ವಿದ್ಯಾರ್ಥಿಗಳಷ್ಟೇ ಅಧ್ಯಾಪಕವರ್ಗವೂ ಶ್ರಮಿಸುತ್ತಿದೆ. ಉತ್ತಮ ಶ್ರೇಣಿಯ ಫಲಿತಾಂಶ ಪಡೆದ ವಿದ್ಯಾರ್ಥಿಗಳು ಶ್ರೀದೇವಿ ಅಂತರಂಗ ಪತ್ರಿಕೆಯೊಂದಿಗೆ ಮುಕ್ತವಾಗಿ ಮಾತನಾಡಿ, ಸಾಧನೆಗೆ ಕಾರಣವಾದ ಅಂಶ, ಭವಿಷ್ಯದ ತಮ್ಮ ಕನಸುಗಳನ್ನು ಬಿಚ್ಚಿಟ್ಟಿದ್ದಾರೆ. ಯಾರು ಏನು ಹೇಳಿದ್ದಾರೆ ಎಂಬುದನ್ನು ತಿಳಿಯೋಣ.

### ಪಿ.ಜಿ. ರ್‍ಯಾಂಕ್ ವಿದ್ಯಾರ್ಥಿಗಳು:

**ಡಾ. ಎಂ. ಸ್ಫೂರ್ತಿ.** ಎಮರ್ಜೆನ್ಸಿ ಮೆಡಿಸನ್. 1 ನೆಯ ರ್‍ಯಾಂಕ್.

ಈ ವಿಭಾಗದಲ್ಲಿ ಮೊದಲ ತಂಡ ನಮ್ಮದೇ ಆಗಿದ್ದ ಕಾರಣ ಸಿನೀಯರ್‌ಗಳಿಂದ ಕಲಿಕೆಗೆ ಅವಕಾಶ ಸಿಗದೇ ಆರಂಭದಲ್ಲಿ ಸ್ವಲ್ಪ ಆತಂಕಗೊಳಗಾಗಿದ್ದು ನಿಜ. ಅ ಸಂದರ್ಭದಲ್ಲಿ ನೆರವಿಗೆ, ಒತ್ತಾಸೆಯಾಗಿ ನಿಂತದ್ದು ಅಧ್ಯಾಪಕವರ್ಗ ಮತ್ತು ನೆಚ್ಚಿನ ಸಹಪಾಠಿಗಳು. ಸಾಧನೆಗೆ ಮತ್ತೊಂದು ಕಾರಣವೆಂದರೆ ಇಲ್ಲಿನ ಕ್ಯಾಂಪಸ್. ವಿಶೇಷವಾಗಿ ಆಡಳಿತ ವರ್ಗವು ಕಲಿಕೆಗೆ ಅಗತ್ಯವಾದ ವಾತಾವರಣ ನಿರ್ಮಿಸಿರುವುದು ಸಾಧನೆಗೆ ಕೊಡುಗೆಯನ್ನು ಕೊಟ್ಟಿದೆ. ಜೊತೆಗೆ ನನ್ನ ಕುಟುಂಬ ಸದಸ್ಯರ ಬೆಂಬಲ ಸಹ ಸೇರಿಕೊಂಡಿದೆ.

**ಡಾ. ಗುಡೇಪು ಕನಕದುರ್ಗ,** ಜನರಲ್ ಸರ್ಜರಿ, 4ನೆಯ ರಾಂಕ್

ತೆಲಂಗಾಣ ಮೂಲದ ವಿದ್ಯಾರ್ಥಿ. ಕಳೆದ ಏಳು ವರ್ಷಗಳಿಂದ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಹಲವು ವರ್ಷಗಳ ಹಿಂದೆ ತಂದೆಯವರು ಯಾವುದೋ ಕಾರಣಕ್ಕಾಗಿ ಸರ್ಜರಿಗೆ ಒಳಗಾಗಿದ್ದರು. ಆ ಸಂದರ್ಭದಲ್ಲಿ ನಾನು ಕೂಡ ಮುಂದೆ ಸರ್ಜನ್ ಆಗಬೇಕು ಎಂಬ ನಿರ್ಧಾರ ಮಾಡಿದೆ. ಅದರಂತೆ ಛಲದಿಂದ ಹೋರಾಡಿ, ಸಾಧನೆ ಮಾಡಿ ಈ ಹಂತಕ್ಕೆ ಬಂದಿದ್ದೇನೆ. ಇಲ್ಲಿನ ಪರಿಸರ ಉತ್ತಮವಾಗಿದೆ. ನನ್ನ ಯಶಸ್ವಿನಲ್ಲಿ ಕಾಲೇಜಿನ ಬೋಧಕ ಸಿಬ್ಬಂದಿ ಮತ್ತು ಆಡಳಿತ ವರ್ಗದ ಪಾತ್ರವೂ ಬಹಳವಾಗಿದೆ. ಸಫಲತೆಯಲ್ಲಿ ನನ್ನ ತಂದೆ ತಾಯಿಗಳ ಪಾತ್ರ ಸಹ ಮುಖ್ಯವಾಗಿದೆ. ವಿದೇಶಕ್ಕೆ ಹೋಗಿ ಉನ್ನತ ವ್ಯಾಸಂಗ ಮುಗಿಸಿದ ಅನಂತರ ವೃತ್ತಿ ಜೀವನಕ್ಕೆ ಕಾಲಿಡಬೇಕೆಂದು ನಿಶ್ಚಯಿಸಿದ್ದೇನೆ.

**ಡಾ. ಕೆ. ಹರಿಪ್ರಸಾದ್,** ಪಿಜಿ ರೆಸ್ಪಟರಿ ಮೆಡಿಸಿನ್, 9ನೆಯ ರ್‍ಯಾಂಕ್

ವೈದ್ಯಕೀಯ ವೃತ್ತಿಯಲ್ಲಿ ವಿಶೇಷವಾಗಿ ಪ್ರಾಯೋಗಿಕ ತರಬೇತಿ ಪಡೆಯಲು ಶ್ರೀದೇವಿ ಕಾಲೇಜು ನಿಜಕ್ಕೂ ಹೇಳಿ ಮಾಡಿಸಿದ ತಾಣ. ಎಂದರೆ ಅತಿಶಯೋಕ್ತಿಯೇನಲ್ಲ. ಕಾರಣವಿಷ್ಟೆ, ಇಲ್ಲಿ ಸಾವಿರ ಬೆಡ್‌ಗಳ ದೊಡ್ಡ ಆಸ್ಪತ್ರೆಯಿದೆ. ಕ್ಯಾತ್ಲಾಬ್ ಇದೆ. ನಾನಾ ರೀತಿಯ ಐಸಿಯು ಘಟಕಗಳಿವೆ. ಹೀಗಾಗಿ ಎಲ್ಲ ವಿಭಾಗಗಳಲ್ಲಿ ಪ್ರಾಯೋಗಿಕ ತರಬೇತಿಪಡೆದುಕೊಳ್ಳಲು ಸಾಧ್ಯವಾಯಿತು. ವೈದ್ಯಕೀಯ ವೃತ್ತಿಯಲ್ಲಿ ಪ್ರಾಯೋಗಿಕ ತರಬೇತಿ ಕಲಿಕೆಗೆ ಇಲ್ಲಿ ಒತ್ತು ಕೊಡುತ್ತಾರೆ. ವಿಶೇಷವಾಗಿ ಕಾಲೇಜಿನ ಮೂಲ ಸೌಲಭ್ಯ, ಅಧ್ಯಾಪಕರ ನಿರಂತರ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಯಿತು. ಇದಕ್ಕಾಗಿ ವಿಶೇಷವಾಗಿ ಆಡಳಿತ ಮಂಡಳಿಗೆ ಕೃತಜ್ಞನಾಗಿದ್ದೇನೆ. ಭವಿಷ್ಯದಲ್ಲಿ ಉನ್ನತ ವ್ಯಾಸಂಗ ಡಿ.ಎಂ. ಕಾರ್ಡಿಯಾಲಜಿ ಮಾಡಲು ನಿಶ್ಚಯಿಸಿದ್ದೇನೆ.

**ಡಾ. ಮಹಮ್ಮದ್ ಫಜಲುದ್ದೀನ್,** ಜನರಲ್ ಸರ್ಜರಿ, 10ನೆಯ ರ್‍ಯಾಂಕ್

ತುಮಕೂರು ಜಿಲ್ಲೆ, ಶಿರಾ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯನಾಗಿ ಸುಮಾರು 4 ವರ್ಷಗಳ ಕಾಲ ಸೇವೆ ಸಲ್ಲಿಸಿದ ಅನಂತರ ನನಗೆ ಪಿಜಿ ಸೀಟು ಲಭ್ಯವಾಯಿತು. ಸರ್ಕಾರಿ ಸೇವೆಯಲ್ಲಿದ್ದಾಗ ನನ್ನ ಪತ್ನಿ ಇದೇ ಕಾಲೇಜಿನಲ್ಲಿ ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿದ್ದರು.

▶▶ 6ನೇ ಪುಟಕ್ಕೆ...

# ಬಜೆಟ್ ಆಶಯಗಳು ವಾಸ್ತವದಲ್ಲಿ ಕಾರ್ಯಗತಗೊಳ್ಳಲಿ

▶▶ ಮೊದಲನೇ ಪುಟದಿಂದ

ಈಗ ಕರ್ನಾಟಕದ ಜಿ.ಎಸ್.ಡಿ.ಪಿ. ₹ 30.75 ಲಕ್ಷ ಕೋಟಿ ಇರುವುದರಿಂದ ಸಾಲವು ಶೇ25ರ ಆಸುಪಾಸಿನಲ್ಲಿರುವುದರಿಂದ ಹಣಕಾಸು ಸ್ಥಿತಿಯ ಬಗ್ಗೆ ಕಳವಳಗೊಳ್ಳಬೇಕಿಲ್ಲ. ಅದೇ ರೀತಿಯಾಗಿ, ನಮ್ಮ ನಮ್ಮ ವಿತ್ತೀಯ ಕೊರತೆಯು ಜಿ.ಎಸ್.ಡಿ.ಪಿ.ಯಶೇಕಡ 2.9ರಷ್ಟಿದ್ದು, ಇದು ಕೂಡ ಮಿತಿಯೊಳಗೇ ಇದೆ" ಎಂಬುದು ಮುಖ್ಯಮಂತ್ರಿಯವರ ಸಮರ್ಥನೆಯಾಗಿದೆ. ಆದರೆ, ವಿತ್ತೀಯ ಕೊರತೆ ಪ್ರಮಾಣವು ಮಿತಿಯ ವ್ಯಾಪ್ತಿಯ ಅಂಚಿನಲ್ಲಿರುವುದರಿಂದ ಸ್ವಲ್ಪ ಎಚ್ಚರತಪ್ಪಿದರೂ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವ ಅಪಾಯವಿರುತ್ತದೆ. ಇದಕ್ಕಾಗಿ ಆಡಳಿತವನ್ನು ಬಿಗಿಗೊಳಿಸುವ ಸವಾಲು ಮುಖ್ಯಮಂತ್ರಿ ಅವರ ಮುಂದಿದೆ.

ರಾಜ್ಯವು ಕಳೆದ ಎರಡು ವರ್ಷಗಳಿಂದ ರಾಜಸ್ವ ಕೊರತೆಯನ್ನೂ ಎದುರಿಸುತ್ತಿದೆ. ಇದು, ಹೋದ ವರ್ಷ ಸುಮಾರು ₹ 26,000 ಕೋಟಿ ಇದ್ದುದು, ಈ ವರ್ಷ ₹ 19,000 ಕೋಟಿಗೆ ಇಳಿದಿದೆ. ರಾಜಸ್ವ ವೆಚ್ಚದ ಭಾಗವಾಗಿ ಗ್ಯಾರಂಟಿ ಸ್ಕೀಮ್‌ಗಳಿಗೆ ₹ 55 ಸಾವಿರ ಕೋಟಿ ಹಾಗೂ 7ನೇ ವೇತನ ಆಯೋಗ ಜಾರಿಗೆ ಹೆಚ್ಚುವರಿ ₹ 19 ಸಾವಿರ ಕೋಟಿ ನೀಡಿದ್ದು ಇದಕ್ಕೆ ಕಾರಣವೇ ಹೊರತು ದುರಾಡಳಿವಲ್ಲ ಎಂದಿರುವ ಸಿಎಂ, ಮುಂದಿನ ವರ್ಷ ಇದು ಸಮಸ್ಥಿತಿಗೆ ಬರಬಹುದು ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಅವರು ಸಾಧ್ಯವಾಗಿಸಿ, ಮುಂಬರುವ ವರ್ಷಗಳಲ್ಲಿ ಉಳಿತಾಯದ ಬಜೆಟ್ ಮಂಡಿಸುವಂತಹ ಪರಿಸ್ಥಿತಿ ನಿರ್ಮಿಸಬೇಕೆಂಬುದೇ ಜನತೆಯ ನಿರೀಕ್ಷೆಯಾಗಿದೆ.

ಇನ್ನು, ಗ್ಯಾರಂಟಿಗಳಿಗೆ ₹ 52,000 ಕೋಟಿ ಸೇರಿದಂತೆ ವಿವಿಧ ಜನಕಲ್ಯಾಣ ಕಾರ್ಯಕ್ರಮಗಳಿಗೆ ವಾರ್ಷಿಕ ಅಂದಾಜು ₹ 1.02 ಲಕ್ಷ ಕೋಟಿ ವಿನಿಯೋಗವಾಗುತ್ತಿದೆ. ಇದು ಬಹುತೇಕ, ಫಲಾನುಭವಿಗಳ ಖಾತೆಗೆ ನೇರವಾಗಿ ಸೇರುವ ಹಣವಾಗಿದ್ದು, ದುರ್ಬಲರ ಹಾಗೂ ಅಶಕ್ತರ ಸಬಲೀಕರಣದ ಉದ್ದೇಶ ಹೊಂದಿದೆ. ಬಂಡವಾಳ ವೆಚ್ಚಕ್ಕಾಗಿ ₹ 83 ಸಾವಿರ ಕೋಟಿ ಮೀಸಲಿರಿಸಿದ್ದು, ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಸುಮಾರು ಶೇ 50ರಷ್ಟು ಏರಿಕೆ ಕಂಡಿದೆ. ಬಂಡವಾಳ ವೆಚ್ಚದ ಮೂಲಕ ಮಹತ್ವದ ಯೋಜನೆಗಳನ್ನು ಅನುಷ್ಠಾನಗೊಳಿಸಿ ಮೌಲಿಕವಾದ ಸ್ವತ್ತು ಸೃಷ್ಟಿಸಲು ಸರ್ಕಾರ ಒತ್ತು ನೀಡುವುದು ಆವಶ್ಯಕವಾಗುತ್ತದೆ.

ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗಾಗಿ ₹ 4,364 ಕೋಟಿ ತೆಗೆದಿರಿಸಲಾಗಿದೆ. ಅಲ್ಪಸಂಖ್ಯಾತರಲ್ಲಿ, ಮುಖ್ಯವಾಗಿ ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣವು ಎಸ್‌ಎಸ್‌ಎಲ್‌ಸಿಯ ನಂತರದಲ್ಲಿ ಕಡಿಮೆ ಪ್ರಮಾಣದಲ್ಲಿರುವುದನ್ನು ಗಣನೆಗೆ ತೆಗೆದುಕೊಂಡು, ಅದನ್ನು ಹೆಚ್ಚಿಸುವ ಉದ್ದೇಶದಿಂದ 16 ವಸತಿ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ₹ 1,500 ಕೋಟಿಯನ್ನು ಈ ಬಾರಿ ನೀಡಲಾಗಿದೆ. ಈ ಸಂಸ್ಥೆಗಳಲ್ಲಿ ಶೇಕಡಾ 75ರಷ್ಟು ಪ್ರವೇಶಾತಿಗಳನ್ನು ಆ ಸಮುದಾಯದವರಿಗೆ ಹಾಗೂ ಉಳಿದ ಶೇಕಡಾ 25ರಷ್ಟನ್ನು ಇತರರಿಗೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಕಾರ್ಯಕ್ರಮದಿಂದ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣ ಪ್ರಮಾಣ ಸುಧಾರಿಸಲು ಹಾಗೂ ಆ ಮೂಲಕ ಅವರು ದೇಶದ ಮುಖ್ಯವಾಹಿನಿಯಲ್ಲಿ ಸೇರಲು ಪೂರಕವಾಗುವುದನ್ನು ಸರ್ಕಾರ ಖಾತರಿಪಡಿಸಿಕೊಳ್ಳಬೇಕು. ಈ ಫಲಾನುಭವಿಗಳು ಬಜೆಟ್‌ನ ಆಶಯ ಮನಗಂಡು 'ಎಲ್ಲಕ್ಕಿಂತ ತಾಯ್ನಾಡು ಮೊದಲು' ಎಂಬ ಮನೋಭಾವ ಬೆಳೆಸಿಕೊಂಡು ಸಮಾಜದ ಮುಖ್ಯವಾಹಿನಿಯ ಭಾಗವಾಗುವುದು ಮುಖ್ಯವಾಗುತ್ತದೆ. ಸರ್ಕಾರದ ಆಶಯ ಈಡೇರುವಂತೆ ನೋಡಿಕೊಳ್ಳುವ ಉತ್ತರದಾಯಿತ್ವ ಆ ಸಮುದಾಯದ ಮುಖಂಡರದ್ದೂ ಆಗಿರುತ್ತದೆ.

ಆರೋಗ್ಯಸೇವಾ ವಿಷಯಕ್ಕೆ ಬಂದರೆ, ಉತ್ತರ ಕರ್ನಾಟಕ ಭಾಗವು, ಅದರಲ್ಲೂ ಹೈದರಾಬಾದ್ ಹಾಗೂ ಕಿತ್ತೂರು ಕರ್ನಾಟಕ ಭಾಗಗಳು ಬಹಳ ಹಿಂದುಳಿದಿವೆ. ಜನರಿಗೆ ಗುಣಮಟ್ಟದ, ಸುಲಭ ದರದ ಹಾಗೂ ತ್ವರಿತವಾದ ಆರೋಗ್ಯಸೇವೆ ಲಭ್ಯವಾಗಬೇಕೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಾತ್ರ ಬಹಳ ಮುಖ್ಯ. ಆದರೆ, ನಿಜಾಮರ ಆಳ್ವಿಕೆಯಲ್ಲಿದ್ದ ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದ ಕಿತ್ತೂರು ಕರ್ನಾಟಕದಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಸಾರ್ವಜನಿಕ ಆರೋಗ್ಯಸೇವೆ ಎಂಬುದು ಹಿಂದುಳಿದಿದೆ. ಮೈಸೂರು ರಾಜರ ದೂರದರ್ಶಿತ್ವದ ಕಾರಣದಿಂದಾಗಿ ಹಳೆ ಮೈಸೂರು ಭಾಗವು ಈ ವಿಷಯದಲ್ಲಿ ಮುಂದಿದೆ. ಅದೇ ರೀತಿಯಾಗಿ, ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡಾ 20ರಷ್ಟಕ್ಕೆ ಆಶ್ರಯ ನೀಡಿರುವ ರಾಜಧಾನಿ ಬೆಂಗಳೂರಿನಲ್ಲಿ ಕೂಡ ಸಾರ್ವಜನಿಕ ಆರೋಗ್ಯ ಸೇವೆಯ ಮಟ್ಟವು ತೀರಾ ಹಿಂದುಳಿದಿದೆ ಎಂದೇ ಹೇಳಬೇಕಾಗುತ್ತದೆ. ಇಡೀ ಬೆಂಗಳೂರಿನಲ್ಲಿ ಕೇವಲ ಮೂರು ಸೆಕೆಂಡರಿ ಆಸ್ಪತ್ರೆಗಳಾಗಿದ್ದು (ಕೆ.ಸಿ ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ, ಸಿ.ವಿ.ರಾಮನ್ ನಗರ ಸಾರ್ವಜನಿಕ ಆಸ್ಪತ್ರೆ), ಇದು ಇಲ್ಲಿನ ಜನಸಂಖ್ಯೆಗೆ ಯಾವುದಕ್ಕೂ ಸಾಲದಾಗಿದೆ.



ಬೆಂಗಳೂರಿನ ಬಗ್ಗೆ ಹೇಳುವುದಾದರೆ, ಸಂಚಾರ ನಿರ್ವಹಣೆಯು ಇಲ್ಲಿನ ಪ್ರಮುಖ ಸವಾಲಾಗಿದೆ. ಸಂಚಾರ ದಟ್ಟಣೆ ಪರಿಹರಿಸಲು ₹ 40,000 ಕೋಟಿ ವೆಚ್ಚದಲ್ಲಿ ಎರಡು ಟನಲ್ ರಸ್ತೆಗಳ ನಿರ್ಮಾಣ (ಪೂರ್ವ–ಪಶ್ಚಿಮ ಕಾರಿಡಾರ್, ಉತ್ತರ–ದಕ್ಷಿಣ ಕಾರಿಡಾರ್)ದ ಬಗ್ಗೆ ಬಜೆಟ್ ಪ್ರಸ್ತಾಪಿಸಿದ್ದು, ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ₹ 19,000 ಕೋಟಿ ಬ್ಯಾಂಕ್ ಸಾಲಕ್ಕೆ ಸರ್ಕಾರ ಗ್ಯಾರಂಟಿ ನೀಡುವುದಾಗಿ ತಿಳಿಸಲಾಗಿದೆ. ಹಾಗೆಯೇ, ಈಗಿರುವ ಮೆಟ್ರೊ ಜಾಲವನ್ನು ವಿಸ್ತರಿಸುವುದಾಗಿ ಪ್ರಕಟಿಸಲಾಗಿದೆ. ಪೆರಿಫೆರಲ್ ರಿಂಗ್ ರಸ್ತೆಗೆ ₹ 3,000 ಕೋಟಿ, ಎಲಿವೇಟೆಡ್ ರಸ್ತೆ ಹಾಗೂ ಡಬಲ್ ಡೆಕ್ಕರ್ ರಸ್ತೆಗಳ ನಿರ್ಮಾಣ ಕೈಗೊಳ್ಳುವುದಾಗಿಯೂ ತಿಳಿಸಲಾಗಿದೆ. ಆದರೆ, ಸಾರ್ವಜನಿಕರು ತೀವ್ರವಾಗಿ ಪ್ರತಿಭಟಿಸುತ್ತಿದ್ದರೂ ತೀವ್ರವಾಗಿ ಏರಿಸಿರುವ ಮೆಟ್ರೊ ದರದ ಬಗ್ಗೆ ಬಜೆಟ್‌ನಲ್ಲಿ ಚಕಾರ ಎತ್ತದಿರುವುದು ಅಚ್ಚರಿ ಎನ್ನಿಸುತ್ತದೆ. ಏಕೆಂದರೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವೈಯಕ್ತಿಕ ಖಾಸಗಿ ವಾಹನಗಳ ಬಳಕೆ ತಗ್ಗಿಸಿ ಸಾರ್ವಜನಿಕ ಸಾರಿಗೆ ಉತ್ತೇಜಿಸಲು ಭತ್ಯೆಗಳನ್ನು ನೀಡುವ ಕ್ರಮ ಅನುಸರಿಸಲಾಗುತ್ತಿದೆ. ಅಂದರೆ, ಮೆಟ್ರೊದಂತಹ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವವರಿಗೆ ಅಲ್ಲೆಲ್ಲಾ ಸಬ್ಸಿಡಿ ನೀಡಲಾಗುತ್ತಿದೆ. ಇದು ಇಂಗಾಲ ಮಾಲಿನ್ಯಕ್ಕೆ ಕಡಿವಾಣ ಹಾಕುವುದಕ್ಕೂ ಸಹಕಾರಿ. ಬೃಹತ್ ವೆಚ್ಚದ ಟನಲ್‌ರಸ್ತೆಗಳ ನಿರ್ಮಾಣದ ಬಗ್ಗೆ ಹಲವು ವಲಯಗಳಿಂದ ಪ್ರಶ್ನೆಗಳು ಉದ್ಭವವಾಗಿವೆ. ಬೆಂಗಳೂರಿನ ಭೂಪದರದ ವಿನ್ಯಾಸಕ್ಕೆ ಟನಲ್ ರಸ್ತೆಗಳ ನಿರ್ಮಾಣ ಸೂಕ್ತವೇ? ಇದು, ರಸ್ತೆಗಳ ಮೇಲಿನ ದಟ್ಟಣೆಯನ್ನು ನಿಜವಾಗಿಯೂ ಕಡಿಮೆಗೊಳಿಸುತ್ತದೆಯೇ? ಖಾಸಗಿ ವಾಹನಗಳ ಬಳಕೆಯನ್ನು ನಿಯಂತ್ರಿಸುತ್ತದೆಯೇ? ಒಂದೊಮ್ಮೆ ಈ ಟನಲ್ ರಸ್ತೆಗಳನ್ನು ನಿರ್ಮಿಸಿದರೆ ಸವಾರರು ಅದಕ್ಕೆ ನೀಡಬೇಕಾಗುವ ಟೋಲ್‌ದರ ಎಷ್ಟು? ಇತ್ಯಾದಿ ಅಂಶಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದರೆ ಈ ಯೋಜನೆ ಬಗ್ಗೆ ಸ್ಪಷ್ಟ ಕಲ್ಪನೆ ಸಿಗುತ್ತಿತ್ತು.

ತಲಾವಾರು ಆದಾಯದಲ್ಲಿ ರಾಜ್ಯವೇ ಇಡೀ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದ್ದು, ಇದು ಅಂದಾಜು ₹ 3.5ಲಕ್ಷ ಇದೆ. ಈ ವಿಷಯದಲ್ಲಿ ಕರ್ನಾಟಕವು ತಮಿಳುನಾಡು (2ನೇ ಸ್ಥಾನ) ಹಾಗೂ ಮಹಾರಾಷ್ಟ್ರಕ್ಕಿಂತ (3ನೇ ಸ್ಥಾನ) ಮುಂದಿದೆ. ಆದರೆ, ಇದು ರಾಜ್ಯದೆಲ್ಲೆಡೆ ಸಮಾನವಾಗಿ ಹಂಚಿಕೆಯಾಗಿಲ್ಲ. ಅಂದರೆ, ಬೆಂಗಳೂರಿನಂತಹ ನಗರದಲ್ಲಿ ಇದು ವಾರ್ಷಿಕ 7.5 ಲಕ್ಷದಷ್ಟಿದ್ದರೆ ಬೇರೆ ಕೆಲವು ಜಿಲ್ಲೆಗಳಲ್ಲಿ ಕೇವಲ 1–1.5 ಲಕ್ಷದಷ್ಟಿದೆ. ಹೀಗಾಗಿ, ಈ ಅಂತರವನ್ನು ತುಂಬುವ ದಿಸೆಯಲ್ಲಿ ಸರ್ಕಾರವು ಅಭಿವೃದ್ಧಿ ಯೋಜನೆಗಳನ್ನು ವಿಕೇಂದ್ರೀಕರಿಸುವುದು ಮುಖ್ಯವಾಗುತ್ತದೆ.

ವಿದೇಶಿ ಹೂಡಿಕೆ (ಎಫ್.ಡಿ.ಐ)ಯಲ್ಲಿ ರಾಜ್ಯವು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿರುವುದು ಇಲ್ಲಿರುವ ಪ್ರಶಸ್ತ ಉದ್ಯಮ ಕಾರ್ಯಪರಿಸರದ ದ್ಯೋತಕವಾಗಿದೆ. ಆದರೆ, ಬಹುತೇಕ ಕೈಗಾರಿಕೆಗಳು ಬೆಂಗಳೂರು, ದೇವನಹಳ್ಳಿ ವಿಮಾನ ನಿಲ್ದಾಣದ ಹತ್ತಿರ ಘಟಕ ಸ್ಥಾಪಿಸಲು ಅಪೇಕ್ಷಿಸುತ್ತಿರುವುದು ಸ್ವಲ್ಪಮಟ್ಟಿಗೆ ನಿರಾಶೆ ಹುಟ್ಟಿಸುತ್ತದೆ. ಎರಡನೇ ಶ್ರೇಣಿಯ ನಗರಗಳಾದ ಹುಬ್ಬಳ್ಳಿ, ಮೈಸೂರು, ಮಂಗಳೂರು, ಬೆಳಗಾವಿ, ಕಲಬುರಗಿಗಳಲ್ಲಿ ತಮ್ಮ ಘಟಕ ಸ್ಥಾಪಿಸಲು ಉದ್ದಿಮೆಗಳು ಹಿಂದೆಮುಂದೆ ನೋಡುವ ಪರಿಸ್ಥಿತಿ ಇದೆ. ಇದಕ್ಕೆ ಆ ನಗರಗಳಲ್ಲಿನ ಮೂಲಸೌಕರ್ಯ, ಅಲ್ಲಿನ ಬದುಕಿನ ಗುಣಮಟ್ಟ ಸೇರಿದಂತೆ ಹಲವಾರು ಅಂಶಗಳು ಕಾರಣವಾಗಿವೆ. ಇವೆಲ್ಲವನ್ನೂ ಮನಗಂಡು ಸರ್ಕಾರವು ರಾಜ್ಯದೆಲ್ಲೆಡೆ ಉದ್ಯಮ ಹಾಗೂ ಉದ್ಯೋಗ ಸೃಷ್ಟಿಯ ಸಮಾನ ಹಂಚಿಕೆಗೆ ಪೂರಕ ವಾತಾವರಣ ಸೃಷ್ಟಿಸಲು ಒತ್ತು ನೀಡಬೇಕಾಗುತ್ತದೆ.

ನೀರಾವರಿಯು ಮತ್ತೊಂದು ಪ್ರಮುಖ ವಲಯವಾಗಿದೆ. ಅದರಲ್ಲೂ ರಾಜ್ಯಕ್ಕೆ ನಿಗದಿಯಾಗಿರುವ ಕೃಷ್ಣಾನದಿ ನೀರಿನ ಪಾಲನ್ನು ಬಳಸಿಕೊಳ್ಳುವಲ್ಲಿ ನಾವು ಸಾಗಬೇಕಾದ ಹಾಗಿ ಬಹಳ ದೂರವಿದೆ. ತುಮಕೂರು ಜಿಲ್ಲೆಯವರೆಗೂ ವ್ಯಾಪಿಸಿರುವ ಕೃಷ್ಣಾಕೊಳ್ಳದ ನೀರನ್ನು ಪೂರ್ತಿಯಾಗಿ ಬಳಸಿಕೊಂಡರೆ ಹಲವು ಜಿಲ್ಲೆಗಳಿಗೆ ಸೇರಿದ 17ರಿಂದ 18 ಲಕ್ಷ ಎಕರೆಗಳಷ್ಟು ಭೂಮಿಗೆ ನೀರುಣಿಸಲು ಸಾಧ್ಯವಾಗಲಿದೆ. ಇದು ಸಾಧ್ಯವಾಗಬೇಕೆಂದರೆ ಮೊದಲಿಗೆ ಆಲಮಟ್ಟಿ ಅಣೆಕಟ್ಟನ್ನು ಎತ್ತರಗೊಳಿಸಬೇಕಾಗುತ್ತದೆ. ಇದಕ್ಕಾಗಿ 75,000 ಎಕರೆಯನ್ನು ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಅಂದಾಜಿನ ಪ್ರಕಾರ, ಭೂಸ್ವಾಧೀನ ಪರಿಹಾರ, ಕಾಲುವೆಗಳ ನಿರ್ಮಾಣ ಸೇರಿ ಒಟ್ಟು ಸುಮಾರು ₹ 1 ಲಕ್ಷ ರೂ. ಕೋಟಿ ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗುತ್ತದೆ. ಇದೇ ವೇಳೆ, ಈ ಯೋಜನೆಯನ್ನು ಕೇಂದ್ರ ಸರ್ಕಾರವು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಿದರೆ, ಇದರ ತ್ವರಿತ ಅನುಷ್ಠಾನಕ್ಕೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯಗಳು ಕೇಳಿಬಂದಿವೆ. ಹೀಗಾಗಿ, ಸರ್ಕಾರವು ಈ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನಗಳಿಗೆ ಚಾಲನೆ ನೀಡಬೇಕು. ರಾಜ್ಯದಲ್ಲಿ ಬಿಜೆಪಿ ಸಂಸದರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವರೇ ಇದನ್ನು ಮಾಡಿಕೊಳ್ಳಲಿ ಎಂದಾಗಲೀ ಅಥವಾ ಕೇಂದ್ರವೇ ಆಸಕ್ತಿ ವಹಿಸಲಿ ಎಂದಾಗಲೀ ಪ್ರತಿಷ್ಠೆ ಮಾಡುವುದು ಸಲ್ಲ. ಪಕ್ಷಗಳು ಬೇರೆ ಬೇರೆಯಾದರೂ ರೈತರ ಹಿತಾಸಕ್ತಿ ಹಾಗೂ ನಾಡಿನ ಹಿತ ಎಂದಾಗ ಬೇರೆಲ್ಲವನ್ನೂ ಬದಿಗಿರಿಸಿ ಕಾರ್ಯಯೋಜನೆಗಳ ಅನುಷ್ಠಾನವನ್ನು ಮಾತ್ರವೇ ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ.

ಹಾಗೆಯೇ, ಕೇಂದ್ರವು ರಾಜ್ಯಗಳಿಗೆ ನೀಡುವ ತೆರಿಗೆ ಪಾಲಿನಲ್ಲಿ ಕರ್ನಾಟಕಕ್ಕೆ ಕಳೆದ ಸಲ ದಕ್ಕಿದ ಪಾಲು ಶೇಕಡಾ 1.2ರಷ್ಟು ಮಾತ್ರ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಕೇಂದ್ರ ಮಟ್ಟದಲ್ಲಿ ಸಮಾಲೋಚನೆ ನಡೆಸಿ, ರಾಜ್ಯಕ್ಕೆ ಹೆಚ್ಚು ಪಾಲನ್ನು ಲಭ್ಯವಾಗಿಸಿಕೊಳ್ಳಲು ಮನಸ್ಸು ಮಾಡಬೇಕು. ಇಂತಹ ಸಂದರ್ಭದಲ್ಲಿ ಕೇಂದ್ರದೊಡನೆ ಸಮನ್ವಯತೆ ಮೊದಲ ಆದ್ಯತೆಯಾಗಬೇಕೇ ವಿನಾ ಸಂಘರ್ಷದಿಂದ ಆಡಳಿತದ ವೇಗ ತಗ್ಗುತ್ತದೆ.

ನಿರಾಶ್ರಿತರ ಮಾನಸಿಕ ಸ್ವಾಸ್ಥ್ಯಕ್ಕಾಗಿ ಬೆಂಗಳೂರಿನ ಸುಮನಹಳ್ಳಿಯಲ್ಲಿರುವ ನಿರಾಶ್ರಿತರ ಪರಿಹಾರಕೇಂದ್ರದಲ್ಲಿ ನಿಮ್ಹಾನ್ಸ್ ನೆರವಿನ ಮಾನಸಿಕ ಆರೋಗ್ಯಕೇಂದ್ರ ಸ್ಥಾಪನೆಯ ನಿರ್ಧಾರ ಸ್ವಾಗತಾರ್ಹ. ನಿರಾಶ್ರಿತರಿಗೆ, ಅದರಲ್ಲೂ ಭಿಕ್ಷಾಟನೆಗೆ ಇಳಿಯುವವರಿಗೆ ಹೆಚ್ಚಿನ ಸಂದರ್ಭಗಳಲ್ಲಿ ಮಾನಸಿಕ ಸಮಸ್ಯೆಯಿರುತ್ತದೆ ಎಂಬುದನ್ನು ಮುಖ್ಯಮಂತ್ರಿಯವರು ಗುರುತಿಸಿ ಈ ಕ್ರಮಕ್ಕೆ ಮುಂದಾಗಿರುವುದು. ಉತ್ತಮ ನಡೆಯಾಗಿದೆ. ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತಿಜಿಲ್ಲೆಗೆ ಎರಡರಂತೆ 62 ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಪ್ರಾರಂಭಿಸಲು, ಪ್ರಸಕ್ತ ಸಾಲಿನಲ್ಲಿ 15ಕೋಟಿ ಒದಗಿಸಿರುವುದು ಕೂಡ ಮೆಚ್ಚುಗೆಗೆ ಅರ್ಹ. ಅತ್ಯಂತ ಹಿಂದುಳಿದ ಅಲೆಮಾರಿ, ಅರೆಅಲೆಮಾರಿ ಜನಾಂಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಲಾ ಒಂದರಂತೆ ಡಿ.ದೇವರಾಜಅರಸು ವಸತಿ ಶಾಲೆಗಳನ್ನು ಕ್ರೈಸ್ ವತಿಯಿಂದ ಪ್ರಾರಂಭಿಸಲು ಮಾಡಿರುವ ನಿರ್ಧಾರವು ಸಾಕಾರಗೊಂಡರೆ ಶಿಕ್ಷಣ ಸಬಲೀಕರಣಕ್ಕೆ ಉತ್ತಮ ಕೊಡುಗೆ ನೀಡಿದಂತಾಗುತ್ತದೆ.

ಅಲೆಮಾರಿ ಹಾಗೂ ಕಾಡಿನಲ್ಲಿರುವ ಆದಿವಾಸಿಗಳ ಯುವ ಜನಾಂಗಕ್ಕೆ ನೇರವಾಗಿ ಉದ್ಯೋಗ ಒದಗಿಸಲು ಈ ಆಯವ್ಯಯದಲ್ಲಿ ಹಣ ಒದಗಿಸಿರುವುದು ಮುಖ್ಯಮಂತ್ರಿಗಳ ಸಾಮಾಜಿಕ ಕಾಳಜಿಗೆ ಸಾಕ್ಷಿಯಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಸಮಸ್ಯೆಗಳ ಬಗ್ಗೆ ವಿಧಾನ ಮಂಡಲ ಅಧಿವೇಶನದಲ್ಲಿ ವಿಶೇಷಚರ್ಚೆ ನಡೆಸಲು ಮುಂದಾಗಿರುವುದು ಕೂಡ ಸಕಾರಾತ್ಮಕವಾಗಿದೆ.

ಉಳಿದಂತೆ, ಹೊಸ ಕೈಗಾರಿಕಾ ನೀತಿಯನ್ವಯ ₹ 7.5 ಲಕ್ಷ ಹೂಡಿಕೆ ಹಾಗೂ 20 ಲಕ್ಷ ಉದ್ಯೋಗ ಸೃಷ್ಟಿಯ ಗುರಿ ಹಾಕಿಕೊಳ್ಳಲಾಗಿದ್ದು, ಇದನ್ನು ಸಾಕಾರಗೊಳಿಸುವುದು ಅತ್ಯಗತ್ಯ. ಬೆಂಗಳೂರು ಉಪನಗರ ರೈಲು ಯೋಜನೆ, ಪುತ್ತೂರಿನಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ, ವಿರಾಜಪೇಟೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 5,000 ಕೋಟಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯಸೇವೆ ಸುಧಾರಣೆಗೆ ₹ 817 ಕೋಟಿ ಇವೆಲ್ಲವೂ ವಾಸ್ತವದಲ್ಲಿ ಅನುಷ್ಠಾನಗೊಳ್ಳುವಂತೆ ಮಾಡಬೇಕು. ಇವೆಲ್ಲದರ ನಡುವೆ, ಬಜೆಟ್‌ನಲ್ಲಿ ರಾಜ್ಯ ಅಬಕಾರಿಯಿಂದ ₹ 40,000 ಕೋಟಿ ಆದಾಯದ ಗುರಿ ನಿಗದಿ ಮಾಡಿರುವುದು ಆರೋಗ್ಯವಂತ ಸಮಾಜ ನಿರ್ಮಿಸುವ ಆಶಯಕ್ಕೆ ವ್ಯತಿರಿಕ್ತ ಎನ್ನಿಸುತ್ತಿದೆ. ಯಾವುದೇ ಸರ್ಕಾರವು ಆದಾಯಕ್ಕೆ ಅಬಕಾರಿ ಆದಾಯ ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿ ಬರಬಾರದು ಎಂಬುದೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾನ್ ನಾಯಕರ ಧ್ಯೇಯವಾಗಿತ್ತು ಎನ್ನುವುದನ್ನೂ ನಾವು ಮನಗಾಣಬೇಕಾಗುತ್ತದೆ.

▪ ನಿರೂಪಣೆ: ವೆಂಕಟೇಶ್ ಪ್ರಸಾದ್‌ಬಿ.ಎಸ್.

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎನ್.ಭಾರತಿ

ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋನ್ಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು:
ಎನ್. ಆನಂದ

ಪುಟ ವಿನ್ಯಾಸ:
ಸುಮಾ ಸಾಗರ್

# ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳ ಸಾಲಿನಲ್ಲಿ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ

■ **ಕೆ.ಎಸ್. ರಾಜಮನ್ನಾರ್**
**ಹಿರಿಯ ಪತ್ರಕರ್ತರು**

ದೇಶದಲ್ಲಿ ವಿಶೇಷ ಆಸ್ಪತ್ರೆಗಳನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳೆಂದು ಕರೆಯಲಾಗುತ್ತದೆ. ಸಾಮಾನ್ಯ ಆಸ್ಪತ್ರೆಗಳಿಗೆ ಹೋಲಿಸಿದರೆ ವಿಶೇಷ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಲಿದೆ. ಭಾರತದಲ್ಲಿ ಸಾರ್ವಜನಿಕ ಆಸ್ಪತ್ರೆಗಳು 14ನೆಯ ಶತಮಾನದಲ್ಲಿ ಫಿರೋಜ್ ಶಾ ತುಘಲಕನ ಆಡಳಿತ ಕಾಲದಿಂದಲೂ ಚಾಲ್ತಿಯಲ್ಲಿದೆ. 17ನೆಯ ಶತಮಾನದಲ್ಲಿ ಮೊಘಲ್ ಚಕ್ರವರ್ತಿ ಜಹಂಗೀರ್ ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 13ಲಕ್ಷ ನೋಂದಾಯಿತ ಅಲೋಪತಿ ವೈದ್ಯರು, 5 ಲಕ್ಷದ 65 ಸಾವಿರ ಆಯುಷ್ ವೈದ್ಯರು 34 ಲಕ್ಷ ನೊಂದಾಯಿತ ನರ್ಸಿಂಗ್ ಸಿಬ್ಬಂದಿ ಹಾಗೂ 13 ಲಕ್ಷ ಇತರ ಆರೋಗ್ಯ ವೃತ್ತಿಪರರು ಆರೋಗ್ಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 2022ರ ಅಂಕಿಅಂಶಗಳ ಪ್ರಕಾರ ಆರೋಗ್ಯ ಮಾರುಕಟ್ಟೆಯ ಮೌಲ್ಯ 372ಬಿಲಿಯನ್ ಡಾಲರ್. ಭಾರತದಲ್ಲಿ ಹೆಲ್ತ್‌ಕೇರ್ ಅಥವಾ ಆರೋಗ್ಯ ಮಾರುಕಟ್ಟೆ ಪ್ರತಿವರ್ಷ ಶೇಕಡ 18ರ ದರದಲ್ಲಿ ವಿಸ್ತರಣೆಯಾಗುತ್ತಿದೆ. ವ್ಯಕ್ತಿಯ ನಿಜವಾದ ಆಸ್ತಿ ಎಂದರೆ ಆತನು ಗಳಿಸಿದ ಹಣ ಮತ್ತು ಆಸ್ತಿಯಲ್ಲ, ಬದಲಿಗೆ ಉತ್ತಮ ಆರೋಗ್ಯವೇ ಆತನ ನೈಜ ಸಂಪತ್ತು. ಇಂತಹ ಸಂಪತ್ತನ್ನು ಉಳಿಸುವ ಶಕ್ತಿ ಇರುವುದು ವೈದ್ಯರು ಮತ್ತು ಆಸ್ಪತ್ರೆಗಳಿಗೆ ಮಾತ್ರ. ಎಂದರೆ, ಆರೋಗ್ಯ ಸೇವೆಯು ಜೀವನದಲ್ಲಿ ಅತ್ಯಂತ ಮಹತ್ವದ್ದಾಗಿದೆ.

ಡಾ. ಎಂ.ಆರ್. ಹುಲಿನಾಯ್ಕರ್ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಅಸಾಮಾನ್ಯ ಸಾಧನೆ ಮಾಡಿ 'ಸಜ್ಜನ ಸರ್ಜನ್' ಎನಿಸಿಕೊಂಡು ಕಳೆದ 50 ವರ್ಷಗಳಿಂದ ಸಮಾಜಸೇವೆಯಲ್ಲಿ ತೊಡಗಿದ್ದಾರೆ. ಮಡಿಕೇರಿ ಮತ್ತು ತುಮಕೂರುಗಳಲ್ಲಿ ಸರ್ಕಾರಿ ವೈದ್ಯರಾಗಿ ಸೇವೆ ಸಲ್ಲಿಸಿ ಸಾವಿರಾರು ರೋಗಿಗಳ ಜೀವವನ್ನು ಉಳಿಸಿ ವೈದ್ಯಕೀಯ ಹುದ್ದೆಯ ಘನತೆಯನ್ನು ಹೆಚ್ಚಿಸಿದರು. ಅವರು ಕೊಡಗಿನ ವೀರ ಸೇನಾನಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಗೂ ನಡೆದಾಡುವ ದೇವರು, ವಿಶ್ವಕೋಶ ಎಂದೆನಿಸಿಕೊಂಡಿದ್ದ ಸಿದ್ಧಗಂಗಾಮಠಾಧೀಶ ಲಿಂಗೈಕ್ಯ ತುಮಕೂರಿನ ಪರಮಪೂಜ್ಯ ಡಾ. ಶಿವಕುಮಾರಸ್ವಾಮೀಜಿ ಅವರಿಗೆ ಚಿಕಿತ್ಸೆ ನೀಡಿದ್ದಾರೆ.

ಡಾ. ಹುಲಿನಾಯ್ಕರ್ ಅವರು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಈ ಸಂಸ್ಥೆಯು ನಡೆಸುತ್ತಿರುವ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಂದ ಹೊರಬಂದ ಸಾವಿರಾರು ಇಂಜಿನಿಯರ್‌ಗಳು ಮತ್ತು ವೈದ್ಯರು ಭಾರತದಾದ್ಯಂತ ಮತ್ತು ಹೊರದೇಶಗಳಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ.

ಡಾ. ಹುಲಿನಾಯ್ಕರ್ ಅವರು ಶಸ್ತ್ರಚಿಕಿತ್ಸಕ, ಶಿಕ್ಷಣತಜ್ಞ, ಚಿಂತಕ, ಮೌಲ್ಯಯುತ ರಾಜಕಾರಣಿ, ಹೀಗೆ ಬಹುಮುಖಿಯಾಗಿ ತಮ್ಮನ್ನು ಗುರುತಿಸಿಕೊಂಡಿದ್ದರೂ, ವೈದ್ಯವೃತ್ತಿಗೇ ಅವರು ಆದ್ಯತೆಯನ್ನು ನೀಡುತ್ತಾರೆ. ದೂರದ ಧಾರವಾಡದ



ಎನ್‌ಎಬಿಎಚ್ ಮಾನ್ಯತೆ ಪಡೆದ ಜಿಲ್ಲೆಯ ಮೊದಲ ವೈದ್ಯಕೀಯ ಆಸ್ಪತ್ರೆ

## ಆಸ್ಪತ್ರೆಯ ಪರಿಕಲ್ಪನೆ ಹೇಗಿರಬೇಕು

ವೈದ್ಯವೃತ್ತಿಯಲ್ಲಿ ಸುಮಾರು ಐವತ್ತು ವರ್ಷಗಳ ದೀರ್ಘ ಅನುಭವ ಪಡೆದಿರುವ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ಅವರ ಪ್ರಕಾರ "ಆಸ್ಪತ್ರೆಯು ಉತ್ತಮ ಸಂಪರ್ಕ ವ್ಯವಸ್ಥೆ ಹೊಂದಿರಬೇಕು. 200 ಹಾಸಿಗೆಯ ಆಸ್ಪತ್ರೆ ನಿರ್ಮಾಣಕ್ಕೆ ಸುಮಾರು 500 ಕೋಟಿ ರೂ. ಬಂಡವಾಳ ಬೇಕಾಗುತ್ತದೆ. ಉತ್ತಮ ಮತ್ತು ಸುಸಜ್ಜಿತ ಆಸ್ಪತ್ರೆ ಎಂದರೆ ಕಟ್ಟಡ ಮತ್ತು ಯಂತ್ರೋಪಕರಣಗಳ ಮೇಲಷ್ಟೆ ಅವಲಂಬಿತವಾಗಿರುವುದಿಲ್ಲ. ವೈದ್ಯರು– ದಾದಿಯರು ಸ್ಪಂದನಾಶೀಲ, ಸಂಹವನವುಳ್ಳ ವೈದ್ಯಕೀಯ ಸಿಬ್ಬಂದಿಗಳೂ ಅಷ್ಟೇ ಮುಖ್ಯ. ರೋಗಿಗಳಿಂದ ಪ್ರತಿನಿತ್ಯವೂ ಫೀಡ್‌ಬ್ಯಾಕ್ ಬರುವಂತಹ ವ್ಯವಸ್ಥೆಯಿರಬೇಕು. ಇದನ್ನು ವೈದ್ಯಕೀಯ ಭಾಷೆಯಲ್ಲಿ ಪಿ.ಸಿ.ಎ. (personal care assistant) ಎಂದುಕರೆಯುತ್ತಾರೆ. ಆಸ್ಪತ್ರೆಯಲ್ಲಿ ಸಂಶೋಧನೆಗೆ ಆದ್ಯತೆಯಿರಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಅಧ್ಯಯನ ನಿರಂತರವಾಗಿ ಸಾಗುತ್ತಿರಬೇಕು. ಅಲ್ಲದೆ, ಆಸ್ಪತ್ರೆಯ ಆಡಳಿತ ಮಂಡಳಿಗೆ ಬದ್ಧತೆ, ಸಾಮಾಜಿಕ ಕಳಕಳಿ ಇರಬೇಕು.

ಇಂದು ಸುಸಜ್ಜಿತ ಆಸ್ಪತ್ರೆಗಳಲ್ಲಿ ವೈದ್ಯಕೀಯ ವೆಚ್ಚ ಬಹಳ ದುಬಾರಿಯಾಗಿರುತ್ತದೆ. ಆದ್ದರಿಂದ ಬಡವರು ಮತ್ತು ಮಧ್ಯಮವರ್ಗದವರಿಗಾಗಿ ಆಸ್ಪತ್ರೆಯ ವತಿಯಿಂದಲೇ ಗುಣಮಟ್ಟದ ಚಿಕಿತ್ಸೆ ಒದಗಿಸಲು ನೇರ ಆರೋಗ್ಯ ವಿಮಾ ಯೋಜನೆ ಸದ್ಯದಲ್ಲಿಯೇ ಆರಂಭವಾಗಲಿದೆ.

**ವಿಶ್ವದ ಕೆಲವು ಪ್ರತಿಷ್ಠಿತ ಆಸ್ಪತ್ರೆಗಳು:**

- **ರೋಚೆಸ್ಟರ್‌ನ ಮೇಯೊ ಕ್ಲಿನಿಕ್, ಅಮೆರಿಕಾ**
- **ಕ್ಲೀವ್ಲ್ಯಾಂಡ್ ಕ್ಲಿನಿಕ್, ಅಮೆರಿಕಾ**
- **ಟೊರೊಂಟೊ ಜನರಲ್ – ಯೂನಿವರ್ಸಿಟಿ ಆಸ್ಪತ್ರೆ, ಕೆನಡಾ**
- **ಜಾನ್ಸ್ ಹಾಪ್ಕಿನ್ಸ್ ಆಸ್ಪತ್ರೆ, ಅಮೆರಿಕಾ**
- **ಮ್ಯಾಸಚೂಸೆಟ್ಸ್ ಜನರಲ್ ಆಸ್ಪತ್ರೆ, ಅಮೆರಿಕಾ**

**ದೇಶದ ಪ್ರತಿಷ್ಠಿತ ಆಸ್ಪತ್ರೆಗಳು:**

- **ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಆಸ್ಪತ್ರೆ**
- **ಅಪೋಲೋ ಆಸ್ಪತ್ರೆಗಳು**
- **ಫೋರ್ಟಿಸ್ ಹಾಸ್ಪಿಟಲ್ಸ್**
- **ನಾರಾಯಣ ಆಸ್ಪತ್ರೆ**
- **ಮಣಿಪಾಲ್ ಆಸ್ಪತ್ರೆ**
- **ಕ್ಲೌಡ್–9 ಆಸ್ಪತ್ರೆಗಳು**
- **ಕೊಲಂಬಿಯಾ ಏಷ್ಯಾ ಆಸ್ಪತ್ರೆಗಳು**
- **ವೇದಾಂತ – ದಿ ಮೆಡಿಸಿಟಿ ಆಸ್ಪತ್ರೆ**

ತುಪ್ಪದ ಕುರುಹಟ್ಟಿಯಿಂದ ಬರದ ನಾಡಾದ ತುಮಕೂರಿನ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು ಮತ್ತು ಈ ಸೌಲಭ್ಯಗಳಿಗಾಗಿ ಅವರು ಬೆಂಗಳೂರಿನಂತಹ ನಗರಗಳಿಗೆ ಹೋಗುವಂತಹ ಪರಿಸ್ಥಿತಿಯನ್ನು ತಪ್ಪಿಸಬೇಕು ಎಂಬ ಉದ್ದೇಶದಿಂದ ಸ್ವಂತ ಶ್ರಮದಿಂದಲೇ ಸುಮಾರು 12 ವರ್ಷಗಳ ಹಿಂದೆ ಡಾ. ಹುಲಿನಾಯ್ಕರ್ ಅವರು ಕಟ್ಟಿದ 'ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ' ಇಂದು ಬೃಹದಾಕಾರವಾಗಿ ಬೆಳೆದಿದೆ.

ವಿಶ್ವದ ಪ್ರತಿಷ್ಠಿತ ಆಸ್ಪತ್ರೆಗಳಂತೆಯೇ ಹೊಂದಿರುವ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ಕೂಡ ತನ್ನಲ್ಲಿರುವ ಅತ್ಯಾದುನಿಕ ಸೌಲಭ್ಯ ಮತ್ತು ಅಲ್ಲಿರುವ ನುರಿತ ವೈದ್ಯರ ತಂಡದಿಂದಾಗಿ ಇಂದು ರಾಜ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಆಸ್ಪತ್ರೆಯ ಅಂಗಳದಲ್ಲಿ ಸುತ್ತಾಡಿದವರಿಗೆ ಇಂತಹ ಭಾವನೆ ಸಹಜವಾಗಿಯೇ ಮೂಡುತ್ತದೆ.

ವಿದೇಶಗಳಿಂದ ಕೋಟ್ಯಂತರ ರೂಗಳಷ್ಟು ಬೆಲೆಬಾಳುವ ವೈದ್ಯಕೀಯ ಉಪಕರಣಗಳನ್ನು ಆಸ್ಪತ್ರೆಗೆ ತಂದಿರುವುದರ ಜೊತೆಗೆ, ಅಗತ್ಯವಾದ ನುರಿತ ಸಿಬ್ಬಂದಿ ಮತ್ತು ವೈದ್ಯರನ್ನು ನೇಮಿಸಿಕೊಂಡು ಅದರ ಪ್ರಯೋಜನ ತುಮಕೂರು ಮತ್ತು ಅಕ್ಕಪಕ್ಕದ ಜಿಲ್ಲೆಯ ಹಾಗೂ ರಾಜ್ಯದ ಇತರೆಡೆಗಳ ಜನರಿಗೆ ದೊರೆಯುವಂತೆ ಮಾಡುವುದಕ್ಕಾಗಿ ಪ್ರತಿದಿನವೂ ಕಾಳಜಿಯಿಂದ ದುಡಿಯುತ್ತಿದ್ದಾರೆ ಡಾ. ಎಂ.ಆರ್. ಹುಲಿನಾಯ್ಕರ್.

### ಚಿಕಿತ್ಸಾ ವಿಭಾಗ ಮತ್ತು ದೊರೆಯುವ ಸೌಲಭ್ಯಗಳು

ಶ್ರೀದೇವಿ ಸ್ಪೆಷಾಲಿಟಿ ಆಸ್ಪತ್ರೆ 900 ಹಾಸಿಗೆಗಳ ಸೌಲಭ್ಯವನ್ನು ಹೊಂದಿದೆ. ವೈದ್ಯಕೀಯ ಕಾಲೇಜಿಗೆ ಆಸ್ಪತ್ರೆಯೆಂಬುದು ಬೆನ್ನುಮೂಳೆಯಿದ್ದಂತೆ. ಸಾಮಾನ್ಯವಾಗಿ ವೈದ್ಯಕೀಯ ಕಾಲೇಜನ್ನು ಆರಂಭಿಸಿ ಅನಂತರ ಆಸ್ಪತ್ರೆಯನ್ನು ತೆರೆಯುತ್ತಾರೆ. ಆದರೆ ಶ್ರೀದೇವಿ ಶಿಕ್ಷಣ ಸಂಸ್ಥೆ ಮೊದಲು ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಾಣ ಮಾಡಿ ಅನಂತರ ಕಾಲೇಜು ಆರಂಭಿಸಿದುದು ವಿಶೇಷವಾಗಿದೆ ಎಂದು ಹೇಳುವ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಕೆ. ಮೋಹನ್ ಕುಮಾರ್ ಆಸ್ಪತ್ರೆಯಲ್ಲಿ ದೊರಕುವ ಸೌಲಭ್ಯ, ವಿಶೇಷ ಚಿಕಿತ್ಸೆ ಮತ್ತು ಪ್ರತಿವರ್ಷ ಆಸ್ಪತ್ರೆಯ ವತಿಯಿಂದ ಹಮ್ಮಿಕೊಳ್ಳುತ್ತಿರುವ ಜನೋಪಯೋಗಿ ಚಟುವಟಿಕೆಗಳು, ವಿಮಾಯೋಜನೆಗಳ ಸೌಲಭ್ಯ ಎಂಬುದನ್ನು ವಿವರಿಸುತ್ತಾರೆ.

ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಮತ್ತು ಇತರ್ಲ ಸೌಲಭ್ಯಗಳನ್ನೂ ಒಂದೇ ಎಡೆಯಲ್ಲಿ ಒದಗಿಸಬೇಕೆಂಬ ಉದ್ದೇಶದಿಂದ ಈ ಆಸ್ಪತ್ರೆ ರೂಪುಗೊಂಡಿದೆ. ತಜ್ಞ ವೈದ್ಯರು, ಅಗತ್ಯ ಯಂತ್ರೋಪಕರಣಗಳ ಕೊರತೆಯಿಂದಾಗಿ ಯಾವುದೇ ರೋಗಿಯನ್ನು ದೊಡ್ಡ ನಗರಗಳಿಗೆ ಕಳಿಸುವ ಅವಶ್ಯಕತೆಯೇ ಇಲ್ಲದೆ. ಇಲ್ಲಿಯೇ ಎಲ್ಲ ಬಗೆಯ ಚಿಕಿತ್ಸೆಗಳನ್ನು ನೀಡುವ ಅತ್ಯಾಧುನಿಕ ಸೌಲಭ್ಯಗಳನ್ನು ಇದು ಒಳಗೊಂಡಿದೆ.

ಈ ಆಸ್ಪತ್ರೆಯಲ್ಲಿ 18 ಚಿಕಿತ್ಸಾ ವಿಭಾಗಗಳಿವೆ. ಎಲ್ಲ ವಿಭಾಗಗಳಲ್ಲಿ ನುರಿತ, ತಜ್ಞ ವೈದ್ಯರಿದ್ದಾರೆ. 130 ಬೆಡ್ ಸೌಲಭ್ಯವಿರುವ ಐ.ಸಿ.ಯು, ಪ್ರಸೂತಿ ವಿಭಾಗ, ಚರ್ಮರೋಗ ವಿಭಾಗ, ದಂತಚಿಕಿತ್ಸಾ ವಿಭಾಗ, ಗ್ಯಾಸ್ಟ್ರೋ ಎಂಟ್ರಾಲಜಿ, ಅಂಕಾಲಜಿ, ಕಾರ್ಡಿಯಾಲಜಿ, ಸ್ಪೈನ್‌ಸರ್ಜರಿ, ನ್ಯೂರಾಲಜಿ, ನ್ಯೂರೋ ಸರ್ಜರಿ, ಯುರಾಲಜಿ, ನೆಫ್ರೋಲಾಜಿ ಆರ್ಥೋಪೆಡಿಕ್, ಆರ್ಥೋಸರ್ಜರಿ, ಕ್ಯಾನ್ಸರ್ ಚಿಕಿತ್ಸಾ ವಿಭಾಗ, ಐಸಿಯು, ಎನ್.ಐ.ಸಿ.ಯು, ಮೂರು ಆಯಾಮದ ಎಂ.ಆರ್.ಐ, ಸಿ.ಟಿ.ಸ್ಕ್ಯಾನ್, ಅಲ್ಟ್ರಾಸೌಂಡ್, ಎಕ್ಸ್‌–ರೇ ಎಂಡೋಸ್ಕೋಪಿ, ಮಾಡ್ಯೂಲರ್ ಒಟಿ, ಡಯಾಲಿಸಿಸ್, ಕ್ಯಾಥ್‌ಲಾಬ್, ಕೇಂದ್ರೀಕೃತವಾದ ಪ್ರಯೋಗಾಲಯ, ಪ್ಲಾಸ್ಟಿಕ್ ಸರ್ಜರಿ, ರೇಡಿಯಾಲಜಿ, ಫಾರ್ಮಸಿ, ಅಂಬ್ಯುಲೆನ್ಸ್‌ಸೇವೆ ಹೀಗೆ ಸುಸಜ್ಜಿತ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರಬೇಕಾದ ಎಲ್ಲ ಸೌಲಭ್ಯಗಳೂ ಇಲ್ಲಿ ದೊರೆಯುತ್ತವೆ. ಸಾಮಾನ್ಯವಾಗಿ ಇಂತಹ ಅನುಕೂಲ ಮತ್ತು ವಿಶೇಷ ಸೌಲಭ್ಯಗಳ ಆಸ್ಪತ್ರೆಗಳಿಗೆ ವೈದ್ಯಕೀಯ ಭಾಷೆಯಲ್ಲಿ ಬ್ರಾಡ್ ಸ್ಪೆಷಾಲಿಟಿ ಎಂದು ಕರೆಯಲಾಗುತ್ತದೆ.

ಶ್ರೀದೇವಿ ಆಸ್ಪತ್ರೆ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದ 'ರಿನಲ್ ಟ್ರಾನ್ಸ್‌ಪ್ಲಾಂಟೇಷನ್' (Renal transplantation) ಮಾಡುವುದಕ್ಕೆ ಸರ್ಕಾರ ಪರವಾನಗಿ ನೀಡಿದೆ. ರಾಜ್ಯದ ಕೆಲವು ಹೆದ್ದಾರಿ ಆಸ್ಪತ್ರೆಗಳಿಗೆ ಮಾತ್ರ ಇಂತಹ ವಿಶೇಷ ಅವಕಾಶ ಲಭ್ಯವಾಗಿದೆ. ಹೆದ್ದಾರಿಯಲ್ಲಿ ಅಪಘಾತಗಳು ಸಂಭವಿಸಿದಾಗ ಸಕಾಲದಲ್ಲಿ ಸೂಕ್ತಚಿಕಿತ್ಸೆ ಲಭ್ಯವಾಗದೇ ಹಲವರು ಸಾವನ್ನಪ್ಪುತ್ತಾರೆ. ಅಂತಹವರ ಸಂಬಂಧಿಕರು ಇಚ್ಛೆಪಟ್ಟಲ್ಲಿ ಮೃತರ ಮೂತ್ರಪಿಂಡ, ಕಣ್ಣು, ಹೃದಯ ಮುಂತಾದ ಅಂಗಗಳನ್ನು ತೆಗೆದು ಅಗತ್ಯವಿದ್ದವರಿಗೆ ಜೋಡಿಸುವ ವ್ಯವಸ್ಥೆ ಇಲ್ಲಿದೆ. ಒಂದು ವೇಳೆ ನಮ್ಮ ಆಸ್ಪತ್ರೆಯಲ್ಲಿರುವ ರೋಗಿಗಳಲ್ಲಿ ಯಾರಿಗೂ ಅವುಗಳ ಅಗತ್ಯವಿರದಿದ್ದಲ್ಲಿ ಅವುಗಳನ್ನು ಅಗತ್ಯವಿರುವ ಇತರ ಆಸ್ಪತ್ರೆಗಳಿಗೆ ಕಳುಹಿಸಿಕೊಡಲಾಗುವುದು. ಈ ವಿಷಯದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ ಶ್ರೀದೇವಿ ಆಸ್ಪತ್ರೆಯು ಒಡಂಬಡಿಕೆಯನ್ನು ಮಾಡಿಕೊಂಡಿದೆ.

### ವಿಮಾ ಕಂಪನಿಗಳ ಜೊತೆಗೆ ಒಪ್ಪಂದ

ಸುಮಾರು 30ಕ್ಕೂ ಹೆಚ್ಚು ಖಾಸಗಿ ಕಂಪನಿಗಳು ಹಾಗೂ 5–6 ಸರ್ಕಾರಿ ವಿಮಾಯೋಜನೆಗಳೊಂದಿಗೆ ಶ್ರೀದೇವಿ ಆಸ್ಪತ್ರೆ ವಿಮಾ ಒಡಂಬಡಿಕೆಗಳನ್ನು ಮಾಡಿಕೊಂಡಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಮತ್ತು ತುಮಕೂರು ಕೈಗಾರಿಕೆಗಳ ಕೇಂದ್ರವಾಗಿರುವುದರಿಂದ ಕಿಲೋಸ್ಕರ್ ಮೊದಲಾದ ಪ್ರತಿಷ್ಠಿತ ಖಾಸಗಿ ಕಂಪನಿಗಳು, ಇ.ಎಸ್.ಐ, ಕೆ.ಎಸ್.ಆರ್.ಟಿ.ಸಿ, ಆಯುಷ್ಮಾನ್ ಭಾರತ್, ಆಯುಷ್ಮಾನ್ ಆರೋಗ್ಯ ಕರ್ನಾಟಕ, ಯಶಸ್ವಿನಿ, ಹಾಗೂ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ



ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಹೃದ್ರೋಗ ವಿಭಾಗದಿಂದ ಆರಂಭಿಸಲಾದ ಎರಡನೇ ಕ್ಯಾಥ್ ಲ್ಯಾಬ್‌ನ ಮಹತ್ವವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ವಿವರಿಸುತ್ತಿರುವ ಡಾ.ಸುರೇಶ್.

ಸಂಸ್ಥೆಗಳ ವಿಮಾ ಯೋಜನೆಗಳ ಸೌಲಭ್ಯ ಇಲ್ಲಿ ದೊರೆಯುತ್ತದೆ.

ಹೆದ್ದಾರಿಯಲ್ಲಿ ಅಫಘಾತ ಸಂಭವಿಸಿದಾಗ ಅಪಘಾತಕ್ಕೀಡಾದ ವ್ಯಕ್ತಿಯ ಸಂಬಂಧಿಕರಾರೂ ಆ ವ್ಯಕ್ತಿಯ ಬಳಿ ಇಲ್ಲದಿದ್ದರೂ ಅಪಘಾತಕ್ಕೀಡಾದವರಿಗೆ ತುರ್ತು ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ ಮಾಡಲಾಗುವುದು ಮತ್ತು ಮೊದಲ ಎರಡು ದಿನ, ಅಥವಾ ಗರಿಷ್ಠ 30 ಸಾವಿರ ರೂಗಳವರೆಗಿನ ಚಿಕಿತ್ಸೆಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆಸ್ಪತ್ರೆಯಲ್ಲಿ 9 ಆಪರೇಷನ್ ಥಿಯೇಟರ್, ಸುಮಾರು 500 ನುರಿತ ನರ್ಸ್‌ಗಳು ಸುಮಾರು 400 ಜನ ಡಿ. ಗ್ರೂಪ್ ನೌಕರರಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಆ ಸಂಸ್ಥೆಗೆ ಸೇರಿದ ಸಿಬ್ಬಂದಿ ವೈದ್ಯಕೀಯ ಸಲಹೆ ತಪಾಸಣೆ ಮತ್ತು ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯುವ ಅನುಕೂಲವನ್ನು ಇಲ್ಲಿ ಕಲ್ಪಿಸಲಾಗಿದೆ. ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಅನೇಕ ಕೈಗಾರಿಕೆಗಳಿರುವುದರಿಂದ ಅಲ್ಲಿನ ಕಾರ್ಮಿಕರ ಅನುಕೂಲಕ್ಕಾಗಿ ಆಯಾ ಕಂಪನಿಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ಅಲ್ಲಿನ ಕಾರ್ಮಿಕರು ಶ್ರೀದೇವಿ ಆಸ್ಪತ್ರೆಯಲ್ಲಿ ವಿಮಾಯೋಜನೆಯ ಪ್ರಕಾರ ಸಮಾಲೋಚನೆ, ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು.

**ಸಂಪೂರ್ಣ ಉಚಿತ ಚಿಕಿತ್ಸೆ**

ಜನರಲ್ ವಾರ್ಡ್‌ನಲ್ಲಿ ಹಾಗೂ ಓ.ಪಿ.ಡಿಯಲ್ಲಿ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ. ಅಲ್ಲದೆ ಬೆಳಿಗ್ಗೆ ತಿಂಡಿ ಮಧ್ಯಾಹ್ನ ಮತ್ತು ರಾತ್ರಿ ಉಚಿತ ಭೋಜನ ವ್ಯವಸ್ಥೆಯನ್ನು ಸಂಸ್ಥೆಯ ವತಿಯಿಂದಲೇ ಮಾಡಲಾಗುತ್ತದೆ. ಎಲ್ಲಾ ಬಗೆಯ ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗುತ್ತದೆ. ಕೆಲವು ಅಪರೂಪದ ಔಷಧ ಮತ್ತು ವೈದ್ಯಕೀಯ ಸಲಕರಣೆಗಳನ್ನು ಮಾತ್ರ ಹೊರಗಿನಿಂದ ರೋಗಿಗಳು ತರಬೇಕಾಗುತ್ತದೆ.

ಹೃದಯರೋಗಕ್ಕೆ ಸಂಬಂಧಪಟ್ಟಂತೆ ಚಿಕಿತ್ಸೆ ಮತ್ತು ಡಯಾಗ್ನೋಸ್ಟಿಕ್ ವ್ಯವಸ್ಥೆಗಾಗಿ ಹೊಸದಾಗಿ ಶ್ರೀದೇವಿ ಆಸ್ಪತ್ರೆಯಲ್ಲಿ ಎರಡು ಕ್ಯಾಥ್ ಲ್ಯಾಬ್‌ಗಳನ್ನು ಆರಂಭಿಸಲಾಗಿದೆ. ಹೃದಯಾಘಾತವಾದಾಗ ಆಂಜಿಯೋಗ್ರಾಮ್ ಮತ್ತು ಆಂಜಿಯೋಪ್ಲಾಸ್ಟಿ ಮಾಡುವುದಕ್ಕಾಗಿ ಕ್ಯಾಥ್ ಲ್ಯಾಬ್‌ನ ಅಗತ್ಯವಿರುತ್ತದೆ. ನವಜಾತ ಶಿಶುಗಳಿಂದ ಮೊದಲುಗೊಂಡು ಎಲ್ಲ ವಯಸ್ಸಿನವರಿಗೂ ಅಗತ್ಯವಾದ, ವೆಂಟಿಲೇಟರ್ ಸೌಲಭ್ಯ ಅಳವಡಿಸಲಾಗಿರುವ ಐಸಿಯುಗಳನ್ನು ಈ ಆಸ್ಪತ್ರೆಯು ಹೊಂದಿದೆ.

ಒಂದೂವರೆಯಿಂದ ಎರಡು ಕೋಟಿ ರೂ. ಬೆಲೆಯ ಕಂಪ್ಯೂಟರೈಜ್ಡ್ ಅನಾಟಮೈಜ್ ಸೌಲಭ್ಯವನ್ನು ಶ್ರೀದೇವಿ ವೈದ್ಯಕೀಯ ಕಾಲೇಜು ಹೊಂದಿದೆ. ಮೊದಲನೆಯ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳು ಕಲಿಕೆ ಕಾರಣಕ್ಕಾಗಿ ಮೃತ ದೇಹವನ್ನು ಛೇದಿಸಬೇಕಾಗುತ್ತದೆ. ಅದಕ್ಕೆ ಬದಲಾಗಿ ಇದನ್ನು ಉಪಯೋಗಿಸಲಾಗುತ್ತದೆ. ಇದು ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ವೈದ್ಯವೃತ್ತಿಯಲ್ಲಿ ಇನ್ನೂ ಹೆಚ್ಚಿನ ಪರಿಣತಿ ಸಾಧಿಸಲು ಬಯಸುವವರಿಗೆ ಪ್ರಯೋಜನವಾಗಲಿದೆ ಎಂಬುದು ಅವರ ಸಷ್ಟ ಅಭಿಪ್ರಾಯ.



ಐಸಿಯು ಘಟಕ



ಎನ್‌ಐಸಿಯು ಘಟಕ

## ಶ್ರೀದೇವಿ ಆಸ್ಪತ್ರೆಯಲ್ಲಿ 45ಐಸಿಯು ಹಾಸುಗೆ ಮತ್ತು ವೆಂಟಿಲೇಟರ್ ಸೌಲಭ್ಯ

ತುಮಕೂರಿನ ಪ್ರತಿಷ್ಠಿತ ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ 45 ಐಸಿಯು ಹಾಸುಗೆ ಲಭ್ಯವಿದೆ. ನವಜಾತ ಶಿಶು ವಿಭಾಗ ಅಂದರೆ ಎನ್.ಐ.ಸಿ.ಯು ಘಟಕದಲ್ಲಿ 10 ಹಾಸುಗೆಗಳಿವೆ. ಅವಧಿಗೆ ಮುನ್ನ ಜನಿಸುವ ಮತ್ತು ತೂಕ ಕಡಿಮೆ ಇರುವ, ಬೇರೆ ಬೇರೆ ಸೋಂಕು ಜಾಂಡೀಸ್ ಬಂದಿರುವ ಮಕ್ಕಳನ್ನು ಎನ್.ಐ.ಸಿ.ಯು. ಘಟಕದಲ್ಲಿಟ್ಟು ಪಾಲನೆ ಪೋಷಣೆ ಮಾಡಿ ಆರೋಗ್ಯ ಸುಧಾರಣೆ ನಂತರ ಅದನ್ನು ತಾಯಿಯ ಮಡಿಲಿಗೆ ಹಿಂತಿರುಗಿಸಲಾಗುತ್ತದೆ. ಶ್ವಾಸಕೋಶದ ಸೋಂಕು ಮತ್ತಿತರೆ ಆರೋಗ್ಯ ಸಮಸ್ಯೆಗಳಿರುವ ಮಕ್ಕಳಿಗೂ ಚಿಕಿತ್ಸೆ ನೀಡಲಾಗುತ್ತದೆ. ಈ ಘಟಕದಲ್ಲಿ 24 ಗಂಟೆಗಳ ಕಾಲ ದಾದಿಯರು ಮಕ್ಕಳ ತಜ್ಞರು ಮತ್ತು ನಿಯೋನೇಟಾಲಜಿ ತಜ್ಞ (28 ದಿನಗಳ ಮಕ್ಕಳ ವೈದ್ಯ) ವೈದ್ಯರ ಸೇವೆ ಲಭ್ಯವಿರಲಿದೆ. ಬೇರೆ ಆಸ್ಪತ್ರೆಗಳಲ್ಲಿ ಒಂದು ದಿನಕ್ಕೆ 70ರಿಂದ 80ಸಾವಿರ ರೂ ವೆಚ್ಚವಾಗಲಿದ್ದು ಇಲ್ಲಿ ದಿನಕ್ಕೆ 3 ರಿಂದ 4 ಸಾವಿರ ರೂಪಾಯಿ ವೆಚ್ಚದಲ್ಲಿ ಈ ಸೌಲಭ್ಯ ದೊರಕುತ್ತದೆ. ಇದಲ್ಲದೆ ದೊಡ್ಡವರಿಗಾಗಿ ಪ್ರತ್ಯೇಕ ತುರ್ತುನಿಗಾ ಘಟಕ ನಿಗಾ ಘಟಕವಿದೆ. ಇಲ್ಲಿ 35 ಬೆಡ್ ಗಳ ಸೌಲಭ್ಯವಿದೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ ಎಂಐಸಿಯು (MICU) ಎಂದು ಕರೆಯುತ್ತಾರೆ ಗಂಭೀರ ವೈದ್ಯಕೀಯ ಸಮಸ್ಯೆಯಿಂದ ಬಳಲುತ್ತಿರುವವರಿಗಾಗಿ 15 ಶಸ್ತ್ರಚಿಕಿತ್ಸೆಗೆ ಒಳಗಾದವರಿಗಾಗಿ 15 ಸರ್ಜರಿಗಾಗಿ 10 ನ್ಯೂರೋಸರ್ಜರಿಗಾಗಿ ಮತ್ತು 5 ತೀವ್ರ ಸುಟ್ಟ ಗಾಯಗಳ ಚಿಕಿತ್ಸೆಗಾಗಿ 5 ವೆಂಟಿಲೇಟರ್ ಸಹಿತ ಬೆಡ್‌ಗಳು ಲಭ್ಯ. ಪ್ರತಿಷ್ಠಿತ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ದಿನಕ್ಕೆ 1 ಲಕ್ಷರೂ ವೆಚ್ಚವಾಗಲಿದ್ದು, ಇಲ್ಲಿ ಮಾತ್ರ 15 ರಿಂದ ಗರಿಷ್ಠ 20 ಸಾವಿರ ರೂಪಾಯಿಗಳಿಗೆ ಚಿಕಿತ್ಸಾ ಸೌಲಭ್ಯ ದೊರಕಲಿದೆ. ಈ ಘಟಕದಲ್ಲಿ ನುರಿತ ವೈದ್ಯರು ಹಾಗೂ ದಾದಿಯರು ಸೇರಿದಂತೆ 30ಕ್ಕೂ ಹೆಚ್ಚು ನುರಿತ ಸಿಬ್ಬಂದಿ ಪಾಳಿಯಲ್ಲಿ ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಾರೆ.

**ಡಾ. ಪಲ್ಲವಿ, ಡಾ.ಮಧುಚಂದನ್**
**ಡಾ. ಪುರುಷೋತ್ತಮ್ ಐಸಿಯು ಘಟಕದ ಮುಖ್ಯಸ್ಥರು.**

## ತರಬೇತಿ, ಶಿಕ್ಷಣ ಮತ್ತು ಸಮುದಾಯ ಆರೋಗ್ಯ ಸೇವೆಗೆ ಗರಿಷ್ಠ ಬಳಕೆ

ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ 21ವಿಭಾಗಗಳಿವೆ. 18 ಪ್ಯಾರಾಮೆಡಿಕಲ್ ಕೋರ್ಸ್‌ಗಳಿವೆ. ಈ ಆಸ್ಪತ್ರೆ ಎಂ.ಬಿ.ಬಿ.ಎಸ್ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ನರ್ಸಿಂಗ್ ಮತ್ತಿತರ ವಿದ್ಯಾರ್ಥಿಗಳಿಗೂ ಉಪಯೋಗವಾಗುತ್ತಿದೆ ಮತ್ತು ಸಾರ್ವಜನಿಕರೂ ಇದರಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಖಾಯಿಲೆ ಪತ್ತೆ ಹಚ್ಚುವಿಕೆ, ವಿವಿಧ ಬಗೆಯ ಸರ್ಜರಿ ಮತ್ತು ಹಲವು ಬಗೆಯ ರೋಗಿಗಳ ಆರೈಕೆಗಳು ಬಗೆಗೆ ಎಂಬುದು ವಿದ್ಯಾರ್ಥಿಗಳಿಗೆ ಚೆನ್ನಾಗಿ ಮನವರಿಕೆಯಾಗಲಿದೆ.

ಶ್ರೀದೇವಿ ಕಾಲೇಜು ಉತ್ತಮ ವಾತಾವರಣವನ್ನು ಹಾಗೂ ಸೌಲಭ್ಯಗಳನ್ನು ಒದಗಿಸುತ್ತಿರುವುದರಿಂದ, ಇಲ್ಲಿ ಕೋರ್ಸನ್ನು ಮುಗಿಸಿ ಹೊರಬಂದ ತಕ್ಷಣವೇ ವೃತ್ತಿ ಆರಂಭಿಸಲು ಅವರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ ಮತ್ತು ವೃತ್ತಿಯಲ್ಲಿ ಬಹಳ ಬೇಗ ನಿಪುಣತೆಯನ್ನು ಸಾಧಿಸಲು ಅವರಿಗೆ ಉತ್ತಮ ಅಡಿಪಾಯ ದೊರೆತಿರುತ್ತದೆ. ಅದೇ ರೀತಿ ಬಡವರು ಮತ್ತು ಮಧ್ಯಮವರ್ಗದವರಿಗೆ ಕೈಗೆಟುವ ವೆಚ್ಚದಲ್ಲಿ ಶ್ರೀದೇವಿ ಆಸ್ಪತ್ರೆಯಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆ ಲಭ್ಯವಿರುವುದರಿಂದ ಸಾರ್ವಜನಿಕರು ಈ ಸೇವೆಯನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಮಾಡಿಕೊಳ್ಳುತ್ತಿದ್ದಾರೆ.

ಕಾಲೇಜಿನ ವತಿಯಿಂದ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಜಾಗೃತಿ ಮೂಡಿಸುವಂತಹ ಆರೋಗ್ಯ ಶಿಬಿರಗಳನ್ನು ನಡೆಸಲಾಗುತ್ತಿದೆ. ಮಕ್ಕಳಿಗೆ ಯಾವ ಕಾಲದಲ್ಲಿ ಲಸಿಕೆ ಹಾಕಿಸಬೇಕು. ಯಾವ ರೀತಿಯ ಆರೋಗ್ಯ ಕಾಪಾಡಿಕೊಳ್ಳಬೇಕು, ಸಾಂಕ್ರಾಮಿಕ ಖಾಯಿಲೆಗಳು ಹರಡದಂತೆ ಯಾವ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು ಎಂಬ ಬಗ್ಗೆ ತಿಳಿವಳಿಕೆ ಮೂಡಿಸಲಾಗುತ್ತಿದೆ. ಸರಳವಾಗಿ ಹೇಳಬೇಕೆಂದರೆ ತರಬೇತಿ, ಶಿಕ್ಷಣ ಮತ್ತು ಸಮುದಾಯ ಆರೋಗ್ಯ ಸೇವೆಗಾಗಿ ಈ ಆಸ್ಪತ್ರೆ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡಿದೆ. ನಮ್ಮ ಆಸ್ಪತ್ರೆಯು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವುದರಿಂದ ಬಹಳ ಸಂಕೀರ್ಣ ಹಾಗೂ ಅಪರೂಪದ ಶಸ್ತ್ರಚಿಕಿತ್ಸೆಗಳನ್ನೂ ನೆರವೇರಿಸಲು ಶಕ್ಯವಾಗಿದೆ.

ಇನ್ನು ಸುಧಾರಣೆಯ ದೃಷ್ಟಿಯಿಂದ ಹೇಳುವುದಾದರೆ ಇಲಾಖಾವಾರು ಪ್ರತ್ಯೇಕವಾದ ನೋಡಲ್ ಸೆಂಟರ್‌ಗಳನ್ನು ಮಾಡಿದರೆ ಇನ್ನೂ ಹೆಚ್ಚಿನ ಸಾಧನೆ ಮತ್ತು ಸಂಶೋಧನೆ ಮಾಡುವ ಅವಕಾಶ ದೊರೆಯುತ್ತದೆ. ಇದರಿಂದ ಡಿ.ಎಂ. ಕಾರ್ಡಿಯಾಲಜಿ, ಎಂ.ಸಿ.ಎಚ್. ನ್ಯೂರೋಸರ್ಜರಿ ಮತ್ತು ಯುರಾಲಜಿ ಕೋರ್ಸ್‌ಗಳನ್ನು ಆರಂಭಿಸಲೂ ದಾರಿಯಾಗುತ್ತದೆ.

**ಡಾ. ಎಂ.ಎಲ್ ಹರೇಂದ್ರ ಕುಮಾರ್**
**ಪ್ರಾಂಶುಪಾಲರು, ಶ್ರೀದೇವಿ ವೈದ್ಯಕೀಯ ಕಾಲೇಜು**

## ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ವೈದ್ಯರ ಪಾತ್ರ

ಮೆಡಿಕಲ್ ಆಸ್ಪತ್ರೆ ಹೇಗೆ ನಡೆಯಬೇಕು, ಅಲ್ಲಿ ರೋಗಿಗಳ ಆರೈಕೆ ಮತ್ತು ಚಿಕಿತ್ಸಾ ವಿಧಾನದಲ್ಲಿ ವೈದ್ಯರ ಪಾತ್ರ ಮತ್ತು ಕರ್ತವ್ಯಗಳನ್ನು ಹೇಗೆ ನಿರ್ವಹಿಸಬೇಕು ಎನ್ನುವ ಚರ್ಚೆಯಿದೆ. ಹೌಸ್ ಸರ್ಜನ್‌ಗಳ ಕರ್ತವ್ಯವೇನು? ಸ್ನಾತಕೋತ್ತರ ವಿದ್ಯಾರ್ಥಿಗಳ ಜವಾಬ್ದಾರಿಗಳೇನು? ಇವರುಗಳನ್ನು ಮುಂದಿನ ಪ್ರಾಕ್ಟೀಸ್‌ಲೋಕಕ್ಕೆ ಸಿದ್ಧಮಾಡುವ ಪ್ರಾಧ್ಯಾಪಕರು ಮತ್ತು ಇಲಾಖೆಯ ಮುಖ್ಯಸ್ಥರುಗಳ ಕರ್ತವ್ಯ ಮೊದಲಾದವುಗಳು ಇಲ್ಲಿ ವಿಶ್ಲೇಷಣೆಗೆ ಬರುತ್ತದೆ.

ಆಸ್ಪತ್ರೆಯಲ್ಲಿರುವ ಎಲ್ಲಾ ವೈದ್ಯರು ರೋಗಿಗಳನ್ನು ಪರೀಕ್ಷೆ ಮಾಡುತ್ತಾರೆ. ಪ್ರತಿಯೊಬ್ಬರು ತಮ್ಮ ಸೀಮಿತಜ್ಞಾನದೊಂದಿಗೆ ಪೇಶೆಂಟ್ ನೋಡುತ್ತಾರೆ. ಸೀನಿಯರ್ ಡಾಕ್ಟರ್‌ಗಳು ರೋಗಿಯ ಚಲನ–ವಲನ, ಚಿಕಿತ್ಸೆ, ರೋಗ ಪತ್ತೆ ಮತ್ತು ಆರೈಕೆ ಎಲ್ಲವನ್ನೂ ಮಾಡುತ್ತಾರೆ.

ಮೆಡಿಕಲ್ ಕಾಲೇಜಿನ ಸುಸಜ್ಜಿತ ಆಸ್ಪತ್ರೆ ಎಂದರೆ ಅಲ್ಲಿ ಎಲ್ಲಾ ರೀತಿಯ ಚಿಕಿತ್ಸೆ ಲಭ್ಯವಿರಲೇಬೇಕು. ಒಂದು ವೇಳೆ ಅಲ್ಲಿ ಚಿಕಿತ್ಸೆ ದೊರೆಯುವುದಿಲ್ಲವೆಂದರೆ ಬೇರೆಲ್ಲೂ ದೊರೆಯುವುದಿಲ್ಲ ಎಂದರ್ಥ. ಅಂತಹ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಈ ಆಸ್ಪತ್ರೆಗಳಲ್ಲಿರುತ್ತದೆ. ಜೂನಿಯರ್ ಸೀನಿಯರ್ ಡಾಕ್ಟರ್‌ಗಳ ನಂತರ ಪ್ರೊಫೆಸರ್‌ಗಳು, ಅಸಿಸ್ಟೆಂಟ್ ಪ್ರೊಫೆಸರ್‌ಗಳು ಕಾರ್ಯನಿರ್ವಹಿಸುತ್ತಾರೆ. ಇವರು ಜೊತೆಗೆ ಸಂಶೋಧನೆಯಲ್ಲಿ ತೊಡಗುತ್ತಾರೆ. ಇದು ಮೆಡಿಕಲ್ ಕಾಲೇಜಿನ ಆಸ್ಪತ್ರೆ ಕಾರ್ಯನಿರ್ವಹಣೆಯ ಕ್ರಮವಾಗಿದೆ.

**ಡಾ.ಎಂ.ಆರ್. ಹುಲಿನಾಯ್ಕರ್**
**ಅಧ್ಯಕ್ಷರು,**
**ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ.**

## ಸದ್ದಿಲ್ಲದೆ ನಿರ್ದಿಷ್ಟ ಗುರಿಯೊಡನೆ ದುಡಿಮೆ

ಕಳೆದೆರಡು ವರ್ಷಗಳಿಂದ ಡಾ. ಕೆ. ಮೋಹನ್‌ಕುಮಾರ್ ಅವರು ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಮೂಲತಃ ಬೆಂಗಳೂರಿನವರು. ಮಿತಭಾಷಿ. ಆಸ್ಪತ್ರೆಯ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. 1985ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಎಂ.ಆರ್.ಎಂ.ಸಿ.(MRMC) ಕಾಲೇಜಿನಿಂದ ಎಂ.ಬಿ.ಬಿ.ಎಸ್. ಪದವಿ ಗಳಿಸಿ ಅನಂತರ ಮೈಸೂರು ವಿಶ್ವವಿದ್ಯಾಲಯದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಜನರಲ್ ಸರ್ಜರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಸುಮಾರು 35ವರ್ಷದ ಅನುಭವವಿದೆ ಮತ್ತು ಆಸ್ಪತ್ರೆಯ ಆಡಳಿತ ನಿರ್ವಹಣೆಯಲ್ಲಿ 20ವರ್ಷಗಳಿಗೂ ಹೆಚ್ಚಿನ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ನವದೆಹಲಿಯ ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ ಓಒಅಅನುಮೋದನೆಗೊಂಡಿದೆ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲೂ ಮಾನ್ಯತೆ ಪಡೆದಿದೆ. ಡಾ. ಮೋಹನ್ ಕುಮಾರ್ ಅವರ ಕರ್ತವ್ಯನಿಷ್ಠೆಯೇ ಈ ಮಾನ್ಯತೆಗಳಿಗೆ ಮುಖ್ಯ ಕಾರಣ.

## ಜಾಗತಿಕ ಮಾನ್ಯತೆ- ಭವಿಷ್ಯದ ಕನಸು

ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆ 2013ರಲ್ಲಿ ಪ್ರಾರಂಭವಾಯಿತು. ಎಲ್ಲರ ಪರಿಶ್ರಮದಿಂದ ಇಂದು ಅದು ನಿರೀಕ್ಷೆಗೂ ಮೀರಿ ಬೆಳೆದಿದೆ, ಸ್ಪೆಷಾಲಿಟಿ ಆಸ್ಪತ್ರೆಯಾಗಿ ಗುಣಮಟ್ಟದ ಚಿಕಿತ್ಸೆಗೆ ಹೆಸರಾಗಿದೆ. 200 ಸ್ಪೆಷಲಿಸ್ಟ್ ಮತ್ತು 200 ಡ್ಯೂಟಿ ಡಾಕ್ಟರ್ ಸೇರಿದಂತೆ 400 ವೈದ್ಯರಿದ್ದಾರೆ. ಒಂದೇ ಸೂರಿನಡಿ ಎಲ್ಲಾ ಬಗೆಯ ಆರೋಗ್ಯ ಸೇವೆಗಳೂ ಇಲ್ಲಿ ಲಭ್ಯವಿವೆ. ರೋಗಿಗಳಿಗೆ ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಬಂದಿದ್ದೇನೆ ಎಂಬ ಭಾವನೆಯೇ ಬಾರದಂತೆ, ಮನೆಯಲ್ಲಿಯೇ ಸಿಗುವಂತಹ ಅತ್ಯುತ್ತಮ ಸೇವೆ (ಊಠಟಜ ಛಿಆಜಿಜ) ದೊರಕಬೇಕು ಎಂಬ ಗುರಿಯಿದೆ. ವಿದೇಶಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುವಂತಹ ಮತ್ತು ವಿಶ್ವದ ಪ್ರತಿಷ್ಠಿತ ಆರೋಗ್ಯ ಸಂಸ್ಥೆಗಳು, ಹಾಗೂ ಮಲೇಷಿಯಾ, ಮಧ್ಯಪ್ರಾಚ್ಯ ರಾಷ್ಟ್ರಗಳ ಆರೋಗ್ಯ ಸಂಸ್ಥೆಗಳು ನಮ್ಮ ಸೇವೆಯನ್ನು ಗುರುತಿಸಿ ಅವು ಮಾನ್ಯತೆ ನೀಡುವಂತೆ ಮಾಡುವ ನಿಟ್ಟಿನಲ್ಲಿ ಪ್ರಯತ್ನ ನಿರಂತರವಾಗಿದೆ.

**ಡಾ. ರಮಣ ಎಂ. ಹುಲಿನಾಯ್ಕರ್**
**ಮೆಡಿಕಲ್ ಡೈರೆಕ್ಟರ್, ಶ್ರೀದೇವಿ ಆಸ್ಪತ್ರೆ**

“ದೇಶದ ಯುವಕರಿಗೆ ವಿದೇಶಗಳಲ್ಲಿ ದೊಡ್ಡಮಟ್ಟದಲ್ಲಿ ಉದ್ಯೋಗ ದೊರಕಿಸಲು ಪರಿಣಾಮಕಾರಿ ತರಬೇತಿ ನೀಡಲು ಮೊದಲ ಕೌಶಲ್ಯ ಭಾರತ ಅಂತಾರಾಷ್ಟ್ರೀಯ ಕೇಂದ್ರ ಭುವನೇಶ್ವರದಲ್ಲಿ ಸ್ಥಾಪನೆಯಾಗಿದೆ. ಪ್ರಧಾನಮಂತ್ರಿ ಕೌಶಲ್ ವಿಕಾಸ್ ಯೋಜನೆಯಡಿ ಈವರೆಗೆ ಸುಮಾರು ಒಂದು ಕೋಟಿಗೂ ಹೆಚ್ಚು ಮಹಿಳೆಯರು ಕೌಶಲ್ಯ ತರಬೇತಿ ಪಡೆದಿದ್ದಾರೆ. ಭಾರತ ಆರ್ಥಿಕ ಸ್ವಾವಲಂಬನೆಯಲ್ಲಿ ಮತ್ತು ಜಗತ್ತಿನ ಮೂರನೇ ಆರ್ಥಿಕ ಶಕ್ತಿಶಾಲಿ ರಾಷ್ಟ್ರವಾಗಿ ಹೊರ ಹೊಮ್ಮುವಲ್ಲಿ ಇದು ಮಹತ್ತರ ಪಾತ್ರವಹಿಸಲಿದೆ. ಕೌಶಲ್ಯ ತರಬೇತಿ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ವಿಮರ್ಶಾತ್ಮಕ ಚಿಂತನೆ, ನಿರ್ಧಾರ ತೆಗೆದುಕೊಳ್ಳುವಿಕೆ, ಸೃಜನಶೀಲ ಅಲೋಚನೆ,ಇಂಗ್ಲಿಷ್ ಭಾಷೆ ಮತ್ತು ಸಂವಹನ ಮುಂತಾದ ಜೀವನ ಕೌಶಲ್ಯ ಬೆಳೆಸಲು,ಮತ್ತು ದೈನಂದಿನ ಸವಾಲು ಎದುರಿಸಲು ಅನುವು ಮಾಡಿಕೊಡಲಿದೆ.

ಫ್ಯೂಚರ್ ವರ್ಕ್ ಲ್ಯಾಬ್ ಕಾರ್ಯಾಗಾರದಲ್ಲಿ ಪ್ರೊ.ಡಂಕನ್ ಬೆಂಟ್ಲಿ ಉವಾಚ

# ಭಾರತ ಜಗತ್ತಿನ ಕೌಶಲ್ಯದ ರಾಜಧಾನಿ




“ಜಗತ್ತಿಗೆ ನುರಿತ ಮಾನವ ಸಂಪನ್ಮೂಲ ಒದಗಿಸಲು ಸ್ಕಿಲ್ ಇಂಡಿಯಾ ಪರಿಕಲ್ಪನೆ ಸಹಕಾರಿ “ರಹದಾರಿ” ಈ ಮಾತನ್ನು ಪ್ರಧಾನಿ ನರೇಂದ್ರ ಮೋದಿ ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹೇಳಿದ್ದರು. ಪ್ರಧಾನಿ ಮಾತಿಗೆ ಆಸ್ಟ್ರೇಲಿಯಾದ ಫೆಡರೇಷನ್ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಡಂಕನ್ ಬೆಂಟ್ಲಿ ಭಾರತದಲ್ಲಿ ಅದು ಬೆಂಗಳೂರಿಗೆ ಕೂಗಳತೆ ದೂರದಲ್ಲಿರುವ ತುಮಕೂರಿನಲ್ಲಿ ಸಹಮತ ವ್ಯಕ್ತಪಡಿಸಿದ್ದಾರೆ. ಭಾರತ ಸಮಗ್ರ ಅಭಿವೃದ್ಧಿಗೆ ಪ್ರಧಾನಿ ಪರಿಕಲ್ಪನೆಯ ಸ್ಕಿಲ್ ಇಂಡಿಯಾ ದಾಪುಗಾಲಾಗಲಿದೆ ಎಂದೂ ಒತ್ತಿ ಹೇಳಿದ್ದಾರೆ. ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಫ್ಯೂಚರ್ ವರ್ಕ್ ಲ್ಯಾಬ್ ಕಾರ್ಯಾಗಾರದಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಸ್ಕಿಲ್ ಇಂಡಿಯಾ ಪರಿಕಲ್ಪನೆ ಸಾಕಾರಗೊಳ್ಳುವಲ್ಲಿ ದೇಶದಲ್ಲಿನ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಹಾಗೂ ಐಟಿಐ – ಪಾಲಿಟೆಕ್ನಿಕ್ ಕಾಲೇಜುಗಳ ಪಾತ್ರ ಬಹಳವಾಗಿದೆ. ನುರಿತ ಮಾನವ ಸಂಪನ್ಮೂಲ ತಯಾರು ಮಾಡುವಲ್ಲಿ ಹಾಗೂ ದೇಶವನ್ನು ಅಭಿವೃದ್ಧಿಪಥದಲ್ಲಿ ಕೊಂಡಯ್ಯುವಲ್ಲಿ ಸರ್ಕಾರದಷ್ಟೇ ಪಾತ್ರವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ವಹಿಸುತ್ತಿವೆ.

ಇದು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ, ನಿರ್ಧಾರ ತೆಗೆದುಕೊಳ್ಳುವಿಕೆ, ಸೃಜನಶೀಲ ಅಲೋಚನೆ, ಪರಸ್ಪರ ಸಂಬಂಧ ಕೌಶಲ್ಯ, ಇಂಗ್ಲಿಷ್ ಭಾಷೆ ಮತ್ತು ಸಂವಹನ ಮುಂತಾದ ಜೀವನ ಕೌಶಲ್ಯ ಬೆಳೆಸುತ್ತದೆ, ಇದರಿಂದಾಗಿ ಅವರು ದೈನಂದಿನ ಜೀವನದ ಸವಾಲು ಎದುರಿಸಲು ಅನುವು ಮಾಡಿಕೊಡಲಿದೆ.

ಆಸ್ಟ್ರೇಲಿಯಾ ವಿಶ್ವವಿದ್ಯಾಲಯದೊಂದಿಗೆ ಕೌಶಲ್ಯ ತರಬೇತಿ ಮತ್ತು ಪ್ಲೇಸ್ಮೆಂಟ್ ಕುರಿತು 'ನೇರ ತಿಳುವಳಿಕೆ ಒಪ್ಪಂದ' (M.O.U) ಮಾಡಿಕೊಂಡಿರುವ ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ರಾಜ್ಯದಲ್ಲೇ ಪ್ರಥಮ ಎಂದರೂ ಅತಿಶಯೋಕ್ತಿಯೇನಲ್ಲ.

ವಿದೇಶದಲ್ಲಿ ಅವಕಾಶ ಹೆಚ್ಚಿಸುವ ಗುರಿಯೊಂದಿಗೆ, ತರಬೇತಿ ನೀಡಲು ಮೊದಲ ಕೌಶಲ್ಯ ಭಾರತ ಅಂತಾರಾಷ್ಟ್ರೀಯ ಕೇಂದ್ರವನ್ನು ಭುವನೇಶ್ವರದಲ್ಲಿ ಸ್ಥಾಪಿಸಲಾಗಿದೆ. ಪ್ರಧಾನಮಂತ್ರಿ 'ಕೌಶಲ್ ವಿಕಾಸ್ ಯೋಜನೆಯಡಿ' ಈವರೆಗೆ ಸುಮಾರು ಒಂದು ಕೋಟಿಗೂ ಹೆಚ್ಚು ಮಹಿಳೆಯರು ಕೌಶಲ್ಯ ತರಬೇತಿ ಪಡೆದಿದ್ದಾರೆ ಭಾರತ ಆರ್ಥಿಕ ಸ್ವಾವಲಂಬನೆಯಲ್ಲಿ ಮತ್ತು ಜಗತ್ತಿನ ಮೂರನೇ ಆರ್ಥಿಕ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮುವಲ್ಲಿ ಇದು ಮಹತ್ತರ ಪಾತ್ರವಹಿಸಲಿದೆ.

ಭಾರತವನ್ನು ಜಗತ್ತಿನ ಕೌಶಲ್ಯ ರಾಜಧಾನಿಯನ್ನಾಗಿ ಮಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ವಿಶೇಷ ಪ್ರಯತ್ನ ಮಾಡಿದ್ದಾರೆ. ಅವರ ಕನಸು ಸಾಕಾರಗೊಳಿಸಲು ಯುವಕರು ಸಂಕಲ್ಪ ಮಾಡಬೇಕು. ಇಡೀ ಜಗತ್ತಿಗೆ ಮಾನವ ಸಂಪನ್ಮೂಲ ಒದಗಿಸುವ ಶಕ್ತಿ ಭಾರತಕ್ಕಿದೆ. ವಿದ್ಯಾರ್ಥಿಗಳು ಕಾಲೇಜು ದಿನಗಳಲ್ಲಿ ಕೈಗಾರಿಕೆಗಳ ಬೇಡಿಕೆ, ಅವಶ್ಯಕತೆ ತಕ್ಕಂತಹ ಕೌಶಲ್ಯ ಮತ್ತು ಅನುಭವವನ್ನು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಆಸ್ಟ್ರೇಲಿಯಾ ವಿಶ್ವವಿದ್ಯಾಲಯ ಇಲ್ಲಿನ ಯುವಕರಿಗೆ ಎಲ್ಲ ರೀತಿಯ ತರಬೇತಿ ನೀಡಲು ಮುಂದಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೂ ಕೌಶಲ್ಯ ಹಾಗೂ ಬೋಧನೆ ಬಗ್ಗೆ ತರಬೇತಿ ನೀಡಲಾಗುವುದು. ಕೇವಲ ಪದವಿ ಪಡೆದು ಕಾಲೇಜಿನಿಂದ ಹೊರಗೆ ಬಂದರೆ ಪ್ರಯೋಜನವಿಲ್ಲ. ಜಾಗತಿಕ ಕೈಗಾರಿಕೆಗಳ ಬೇಡಿಕೆಗೆ ತಕ್ಕಂತೆ ಸಾಮರ್ಥ್ಯ ಗಳಿಸಿಕೊಂಡರೆ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಉದ್ಯೋಗ ಮಾಡಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದಾಗಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಕೌಶಲ್ಯ ಹೆಚ್ಚಿಸಲು ಪ್ರಾಮುಖ್ಯತೆ ನೀಡುತ್ತಿರುವ ಬಗ್ಗೆ ಡಂಕನ್ ಪ್ರಶಂಸೆ ವ್ಯಕ್ತಪಡಿಸಿದರು.

ಎಂಪ್ಲಾಯಬಲಿಟಿ.ಲೈಫ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜಾದಾಸ್ ಗುಪ್ತ ಮಾತನಾಡಿದರು. 'ಬದುಕಿನ ಯಾವುದೇ ಸನ್ನಿವೇಶ ಎದುರಿಸುವಂತಹ ಕೌಶಲ್ಯವನ್ನು ಇಂದಿನ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು' ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಅಭಿಪ್ರಾಯಪಟ್ಟಿದ್ದಾರೆ.

▪ ಕೆ.ಎಸ್. ರಾಜಮನ್ನಾರ್

“ಶಿಕ್ಷಣ ಸಂಸ್ಥೆಗಳನ್ನು ಹಾಗೂ ವೈದ್ಯಕೀಯ ಆಸ್ಪತ್ರೆಯನ್ನು ಕಟ್ಟಿ ಬೆಳೆಸುವಲ್ಲಿ ನಿರ್ವಹಣೆ ಮತ್ತು ಜನೋಪಯೋಗಿಯಾಗಿಸುವಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮುಂದಾಲೋಚನೆ ಮಾದರಿಯಾಗಿದೆ. ಶ್ರೀದೇವಿ ಕಾಲೇಜಿನಲ್ಲಿ ಮತ್ತು ಆಸ್ಪತ್ರೆಯಲ್ಲಿ ವಿಶ್ವ ದರ್ಜೆಯ ಮೂಲಭೂತ ಸೌಲಭ್ಯ ಕಲ್ಪಿಸಿದ್ದಾರೆ. ವಿಶೇಷವಾಗಿ ಕೌಶಲ್ಯಕ್ಕೆ ಒತ್ತು ಕೊಟ್ಟಿರುವುದು, ಕಾಲೇಜಿನ ಅಂಗಳಕ್ಕೆ ಭೇಟಿ ನೀಡಿದಾಗ ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದ ಅವರಿಗೆ ಗುಣಮಟ್ಟದ ಶಿಕ್ಷಣದ ಬಗ್ಗೆ ಎಂತಹ ಕಾಳಜಿ, ಕಳಕಳಿ ಇದೆ ಎಂಬುದು ಅರ್ಥವಾಗುತ್ತದೆ”

ಡಂಕನ್ ಬೆಂಟ್ಲಿ
ಫೆಡರೇಶನ್ ವಿಶ್ವವಿದ್ಯಾಲಯ ಕುಲಪತಿ
ಆಸ್ಟ್ರೇಲಿಯಾ

# ವೈದ್ಯಕೀಯ ವಸ್ತು ಪ್ರದರ್ಶನ ವಿದ್ಯಾರ್ಥಿಗಳ ಆತ್ಮವಿಶ್ವಾಸಕ್ಕೆ ಟಾನಿಕ್



ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಪ್ರತಿ ವರ್ಷ ಶ್ರೀದೇವಿ ಪ್ಯಾರ ಮೆಡಿಕಲ್ ಕಾಲೇಜು ವತಿಯಿಂದ ವೈದ್ಯಕೀಯ ಕ್ಷೇತ್ರದ ಬೆಳವಣಿಗೆ ಕುರಿತ ವಿಜ್ಞಾನ ವಸ್ತು ಪ್ರದರ್ಶನವನ್ನು ನಿರಂತರವಾಗಿ ಕಳೆದ ನಾಲ್ಕುವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವುದು ಮತ್ತು ಮುಂದಿನ ಭವಿಷ್ಯ ರೂಪಿಸಿಕೊಳ್ಳುವಲ್ಲಿ ವಿಜ್ಞಾನ ವಸ್ತು ಪ್ರದರ್ಶನ ವಿದ್ಯಾರ್ಥಿಗಳ ಪಾಲಿಗೆ ಪ್ರಮುಖವಾಗಿದೆ.

ಈ ಬಾರಿಯ ವಿಶೇಷ ಎಂದರೆ ವಿದ್ಯಾರ್ಥಿಗಳಷ್ಟೇ ಸಾರ್ವಜನಿಕರು ಸಹ ವಸ್ತು ಪ್ರದರ್ಶನ ವೀಕ್ಷಣೆಗೆ ಆಸಕ್ತಿ ತೋರಿದ್ದಾರೆ. ವಸ್ತು ಪ್ರದರ್ಶನದಲ್ಲಿ 480ಕ್ಕೂ ಹೆಚ್ಚು ವಿಜ್ಞಾನದ ಮಾದರಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಇದರಲ್ಲಿ ಬಹುಪಾಲು ವೈದ್ಯಕೀಯ ಲೋಕಕ್ಕೆ ಸಂಬಂಧಪಟ್ಟಿದ್ದವು” ಎಂದು ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜು ಪ್ರಾಂಶುಪಾಲ

ಡಾ. ಎಂ. ಸಿ.ಕೃಷ್ಣ ಮಾಹಿತಿ ನೀಡಿದ್ದಾರೆ. ಹೃದಯರೋಗ, ಶ್ವಾಸಕೋಶ, ಮೂತ್ರಪಿಂಡಕ್ಕೆ ಸಂಬಂಧಿಸಿದ 150 ಮಾದರಿಗಳು ಇದ್ದಲ್ಲದೆ ಭೌತಶಾಸ್ತ್ರ30, ರಸಾಯನಶಾಸ್ತ್ರ26, ಜೀವಶಾಸ್ತ್ರ33 ಹಾಗೂ ಶರೀರ ಅಂಗರಚನೆ (ಅನಾಟಮಿ)ಗೆ ಸಂಬಂಧಪಟ್ಟ 26 ಮಾದರಿಗಳನ್ನು ಪ್ರಾತ್ಯಕ್ಷಿಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು. ತುಮಕೂರು ಜಿಲ್ಲೆಯ ಎಲ್ಲಾ ಹತ್ತುತಾಲೂಕಿನ ವಿದ್ಯಾರ್ಥಿ/ಸಾರ್ವಜನಿಕರಲ್ಲದೆ ನೆರೆಯ ಚಿತ್ರದುರ್ಗ, ದಾವಣಗೆರೆ, ಹಾಸನ, ಮಂಡ್ಯ ಜಿಲ್ಲೆಗಳಿಂದಲೂ ಸಾವಿರಾರು ಜನರು ಈ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಬಗ್ಗೆ ಇರುವ ಅನಗತ್ಯ – ಗಾಬರಿ –ಗೊಂದಲ ನಿವಾರಿಸಿ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವುದು ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳು ಮುಂದಿನ ವೈದ್ಯಕೀಯ ಕೋರ್ಸ್ ಆಯ್ಕೆ ಮಾಡಿಕೊಳ್ಳಲು ಈ ವಿಜ್ಞಾನ ಪ್ರದರ್ಶನ ಬಹಳಷ್ಟು ಮಟ್ಟಿಗೆ ನೆರವಾಗಲಿದೆ.

ಮುಂದಿನ ಮೇ ತಿಂಗಳಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಪರೀಕ್ಷೆ ನಡೆಸಲಿದ್ದು ಅದರಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಶ್ರೀದೇವಿ ಕಾಲೇಜು ಹಮ್ಮಿಕೊಂಡಿದೆ ಎಂದು ಪ್ರಾಂಶುಪಾಲರು ಮಾಹಿತಿ ನೀಡಿದ್ದಾರೆ. ವಿಶೇಷವಾಗಿ ಗ್ರಾಮೀಣ ಮಕ್ಕಳಿಗೆ ಹೆಚ್ಚು ಪ್ರಯೋಜನ ದೊರಕಬೇಕು ಎಂಬ ಕಾಳಜಿ, ಕಳಕಳಿಯಿಂದ ಇದನ್ನು ಪ್ರತಿ ವರ್ಷ ನಡೆಸಿಕೊಂಡು ಬರಲಾಗುತ್ತಿದೆ.

▪ ವರದಿ: ಕೆ.ಎಸ್. ರಾಜಮನ್ನಾರ್



## ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳ ಸಂಘದ ಕಾರ್ಯಕಾರಿ ಸಮಿತಿಗೆ ಡಾ. ರಮಣ್ ಎಂ. ಹುಲಿನಾಯ್ಕರ್ ನೇಮಕ

ತುಮಕೂರಿನ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಸದಸ್ಯ ಹಾಗೂ ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೆಡಿಕಲ್ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್ ಅವರನ್ನು ಕರ್ನಾಟಕ ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಘದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಕಳೆದ ಫೆಬ್ರವರಿ 17ರಂದು ಬೆಂಗಳೂರಿನಲ್ಲಿ ಜರುಗಿದ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಈ ನೇಮಕಾತಿಗೆ ಅನುಮೋದನೆ ದೊರಕಿದೆ ಎಂದು ಸಂಘದ ಕಾರ್ಯದರ್ಶಿ ಡಾ. ಎಂ. ಪಿ. ಶ್ಯಾಮ್ ತಿಳಿಸಿದ್ದಾರೆ.

ತಮ್ಮ ಮೇಲೆ ವಿಶ್ವಾಸವಿಟ್ಟು ಆಯ್ಕೆ ಮಾಡಿದ ಸಂಘ ಮತ್ತು ಪದಾಧಿಕಾರಿಗಳಿಗೆ ಡಾ. ರಾಮಣ್ ಧನ್ಯವಾದ ಸಲ್ಲಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೃತಕಬುದ್ಧಿ ಮತ್ತೆ ಬಳಸಿಕೊಂಡು ತಂತ್ರಜ್ಞಾನ ವಲಯದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ದೊರಕಿಸುವ ಪ್ರಯತ್ನಕ್ಕೆ ಸಂಘ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

## ಹದಿಮೂರು ರ್‍ಯಾಂಕ್ ಗಳಿಸಿ ಹೊಸಭಾಷ್ಯ ಬರೆದ ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು

▶▶ ಮೊದಲನೇ ಪುಟದಿಂದ

ಮುಂದೆ ನಾನು ಸ್ನಾತಕೋತ್ತರ ವೈದ್ಯಕೀಯ ಕೋರ್ಸಿಗೆ ಸೇರಿದಾಗ ನನ್ನ ಪತ್ನಿ ಇದೇ ಕಾಲೇಜಿನಲ್ಲಿ ಸ್ತ್ರೀರೋಗತಜ್ಞೆಯಾಗಿ ಕೆಲಸಕ್ಕೆ ಸೇರಿಕೊಂಡರು. ನನ್ನ ಯಶಸ್ಸಿನಲ್ಲಿ ಆಕೆಯ ತ್ಯಾಗ ಬಹಳ ದೊಡ್ಡದಿದೆ. ನಾನು ಈ ಮಟ್ಟಕ್ಕೆ ಬರಲು ಕಾಲೇಜಿನ ಬೋಧಕ ಸಿಬ್ಬಂದಿ ಮತ್ತು ನನ್ನ ತಂದೆ ತಾಯಿಗಳು ಕಾರಣರಾಗಿದ್ದಾರೆ. ಇಲ್ಲಿನ ಪರಿಸರ ಉತ್ತಮವಾಗಿದ್ದು ವ್ಯಾಸಂಗದ ಸಫಲತೆಗೆ ಇದು ಪ್ರೇರೇಕಶಕ್ತಿಯಾಗಿದೆ.

**ಡಾ. ಎಸ್. ಮಮತಾ** ಪಿಜಿಯಲ್ಲಿ ಎರ್ಮಜೆನ್ಸಿ ಮೆಡಿಸಿನ್ 10ನೆಯ ರ್‍ಯಾಂಕ್

ಕಾಲೇಜಿನಲ್ಲಿ ಅತ್ಯುತ್ತಮ ಮೂಲಸೌಕರ್ಯದ ವ್ಯವಸ್ಥೆಯಿದೆ. ಉತ್ತಮ ಗ್ರಂಥಾಲಯವಿದೆ. ಇಲ್ಲಿನ ಬೋಧಕ ಸಿಬ್ಬಂದಿಯ ಒತ್ತಾಸೆ, ನಿರಂತರ ಮಾರ್ಗದರ್ಶನದಿಂದಾಗಿ ನನ್ನ ಗಮ್ಯವನ್ನು ತಲುಪಲು ಸಾಧ್ಯವಾಯಿತು. ಬೇರೆ ಕಾಲೇಜುಗಳಲ್ಲಿ ಅತ್ಯಾಧುನಿಕ ಉಪಕರಣಗಳ ಬಳಕೆಗೆ ಅವಕಾಶ ಇರುವುದಿಲ್ಲ ಆದರೆ ಈ ಕಾಲೇಜಿನಲ್ಲಿ ಕಲಿಯಲು ಹೆಚ್ಚಿನ ಪ್ರೋತ್ಸಾಹ ಲಭಿಸಿದ್ದರಿಂದ ನಮಗೆ ಸಾಧನೆ ಸಾಧ್ಯವಾಗಿದೆ. ಮುಂದೆ ವಿಶೇಷವಾಗಿ ಜರ್ಮನಿಯಂತಹ ಮುಂದುವರಿದ ದೇಶದಲ್ಲಿ ಎಂ. ಆರ್. ಸಿ.ಇ.ಎಂ. ಕೋರ್ಸ್ ಮಾಡುವ ಗುರಿ ಹೊಂದಿದ್ದೇನೆ. ನನ್ನ ಸಹಪಾಠಿಗಳು ಹಾಗೂ ಪದವಿ ವಿದ್ಯಾರ್ಥಿಗಳೊಂದಿಗೆ ನಿರಂತರ ಸಂವಹನ ನಡೆಸುತ್ತಿದ್ದೆ. ಇದರಿಂದಾಗಿ ಶೈಕ್ಷಣಿಕ ವಲಯದಲ್ಲಿ ಹೆಚ್ಚಿನ ಸಾಧನೆ ಮಾಡಲು ಕಾರಣವಾಯಿತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸಹಪಾಠಿಗಳ ಕೊಡುಗೆ ಅಪಾರವಾಗಿದೆ. ಬೋಧಕವರ್ಗದ ಪ್ರೋತ್ಸಾಹ ಸಹಕಾರವೂ ಅಷ್ಟೆ ಮುಖ್ಯವಾಗಿತ್ತು.

### ಯುಜಿ ರ್‍ಯಾಂಕ್‌ನ ವಿದ್ಯಾರ್ಥಿಗಳು:

**ಶರಣಾದಿತ್ಯ ಸಂಗಮೇಶ್,** ಯುಜಿ

ನನ್ನ ವ್ಯಾಸಂಗದ ಸಫಲತೆಗೆ ಕಾಲೇಜಿನ ಪರಿಸರ, ನುರಿತ ಬೋಧಕ ಹಾಗೂ ಆಡಳಿತವರ್ಗ ಪ್ರಮುಖ ಕಾರಣವಾಗಿದೆ. ಮುಂದೆ ಪಿಜಿ ಕೋರ್ಸ್ ಸೇರಿ ಉನ್ನತ ವ್ಯಾಸಂಗ ಮಾಡಲು ನಿರ್ಧರಿಸಿದ್ದೇನೆ. ಬರುವ ಜೂನ್ 15ರಂದು ನಡೆಯಲಿರುವ ಪಿಜಿ ನೀಟ್ ಪರೀಕ್ಷೆಗೆ ಮಾನಸಿಕವಾಗಿ ಸಜ್ಜಾಗುತ್ತಿದ್ದೇನೆ. ಕಾಲೇಜಿನ ಪ್ರಾಧ್ಯಾಪಕ ಡಾ. ಶಶಿಕಿರಣ್ ಎಲ್ಲಾ ಹಂತದಲ್ಲಿ ನನಗೆ ಮಾರ್ಗದರ್ಶನ ಮಾಡಿ ಬೆನ್ನುತಟ್ಟಿ ಪ್ರೋತ್ಸಾಹ ಕೊಟ್ಟಿದ್ದಾರೆ. ಇದರಿಂದಾಗಿ ಪದವಿ ಹಂತದ ಮೂರು ವಿಭಾಗದಲ್ಲಿ ರ್‍ಯಾಂಕ್ ಪಡೆಯಲು ಸಹಕಾರಿಯಾಯಿತು ಎಂದು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಜೊತೆಗೆ ಹೆತ್ತವರ ಪ್ರೋತ್ಸಾಹ ಯಶಸ್ಸಿಗೆ ಪೂರಕವಾಯಿತು.

**ಎಂ. ದೀಕ್ಷಾ,** 1ನೆಯ ರ್‍ಯಾಂಕ್, ಮೈಕ್ರೋ ಬಯಾಲಜಿ.

ನನ್ನ ವೈದ್ಯಕೀಯ ಪದವಿ ವ್ಯಾಸಂಗದಲ್ಲಿ ಎರಡು ಪ್ರಮುಖ ಘಟ್ಟಗಳಿವೆ. ಮೊದಲನೆಯದು ಕಾಲೇಜಿನ ಅಧ್ಯಾಪಕ ವರ್ಗ, ಎರಡನೆಯದು ತಂದೆತಾಯಿ ಹಾಗೂ ಕುಟುಂಬವರ್ಗದ ಪಾತ್ರ ಬಹಳ ಮಹತ್ವದ್ದು. ಅವರೆಲ್ಲರ ಸಹಕಾರ ಬೆಂಬಲದಿಂದ ಮೈಕ್ರೋಬಯಾಲಜಿಯಲ್ಲಿ ಶೇ. 86ರಷ್ಟು ಅಂಕಗಳನ್ನು ಗಳಿಸಲು ಸಹಾಯವಾಯಿತು. ವಿಶೇಷವಾಗಿ ವಿಭಾಗದ ಮುಖ್ಯಸ್ಥರಾದ ಡಾ. ಪರಿಮಳ ಅವರ ಮಾರ್ಗದರ್ಶನ ನನ್ನ ಯಶಸ್ಸಿಗೆ, ಸಾಧನೆಗೆ ಕಾರಣವಾಗಿದೆ. ಇಲ್ಲಿ ಕಲಿಕೆಗೆ ಉತ್ತಮ ವಾತಾವರಣವಿದೆ. ವಿದ್ಯಾರ್ಥಿಗಳ ನಿರೀಕ್ಷೆಗೆ ತಕ್ಕಂತೆ ಕಾಲೇಜು ಆಡಳಿತವರ್ಗ ಎಲ್ಲ ಸೌಲಭ್ಯ ಒದಗಿಸಿದೆ.

**ಡಿ.ಎ. ಚಿನ್ಮಯಿ,** ಫೊರೆನ್ಸಿಕ್ ಮೆಡಿಸನ್, 2ನೆಯ ರ್‍ಯಾಂಕ್

ಕಾಲೇಜಿನ ಉತ್ತಮ ಪರಿಸರ, ಅನುಭವಿ ಅಧ್ಯಾಪಕವರ್ಗದ ಮಾರ್ಗದರ್ಶನದಿಂದ ಗುರಿ ತಲುಪಲು ಸಾಧ್ಯವಾಗಿದೆ. ವಿಶೇಷವಾಗಿ ಫೊರೆನ್ಸಿಕ್ ಮೆಡಿಸನ್ ವಿಭಾಗದ ಮುಖ್ಯಸ್ಥರಾದ ಡಾ. ಮಧುಸೂದನ್ ಮತ್ತು ಡಾ. ಹೇಮಂತ್‌ರಾಜ್ ಅವರುಗಳು ತೋರಿದ ವಿಶೇಷ ಕಾಳಜಿಯಿಂದಾಗಿ ಪರೀಕ್ಷೆಯಲ್ಲಿ ದೊಡ್ಡಮಟ್ಟದ ಯಶಸ್ಸು, ಕೀರ್ತಿ ಲಭಿಸಿದೆ. ಮುಂಬರುವ ದಿನಗಳಲ್ಲಿ ಜಗತ್ತಿನಾದ್ಯಂತ ವಿಧಿವಿಜ್ಞಾನ ರಂಗದಲ್ಲಿ ತಜ್ಞರಿಗೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿದೆ. ಉನ್ನತ ಸರ್ಕಾರಿ ಉದ್ಯೋಗ ಲಭಿಸಿದರೆ ಅದಕ್ಕೆ ಆದ್ಯತೆ ಕೊಡುವೆ. ಇಲ್ಲವಾದಲ್ಲಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮುಂದುವರಿಸಲು ನಿಶ್ಚಯಿಸಿದ್ದೇನೆ. ಸಾಧನೆಗೆ ಕಾರಣವಾದ ಬೋಧಕವರ್ಗಕ್ಕೆ ತುಂಬು ಹೃದಯದ ಅಭಿನಂದನೆಗಳು. ಕುಟುಂಬದ ಸಹಕಾರವನ್ನೂ ಮರೆಯಲಾಗದು.

# ಮಹಿಳೆಯಿಂದಲೇ ಮಹಿಳಾ ಘನತೆ, ಗೌರವ - ಸ್ವಾಭಿಮಾನ !!




ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅನುಕೂಲಮಾಡಿಕೊಡುವ ಮೂಲಕ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ವಿನೂತನ ಮತ್ತು ಅರ್ಥಪೂರ್ಣ ರೀತಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿತು.

ಚಿತ್ರದುರ್ಗದ ಶಿವಮ್ಮ, ತುಮಕೂರಿನ ಮಂಜುಳಾ, ನಿಟ್ಟೂರು ತಾಲೂಕಿನ ಸೋಮಲಾಪುರದ ಸಾವಿತ್ರಮ್ಮ ಅವರಿಗೆ ಮಹಿಳಾ ದಿನದ ಅಂಗವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ವಿವಿಧ ಕ್ಷೇತ್ರಗಳ ಗಣ್ಯರು ಈ ಸಂದರ್ಭದಲ್ಲಿ ಏನು ಹೇಳಿದರು, ಯಾವ ಸಂದೇಶವನ್ನು ಕೊಟ್ಟರು, ಅವರ ಮಾತಿನ ಇದ್ದ ಹೂರಣವೇನು ಎಂಬುದನ್ನು ನೋಡೋಣ. "ಭಾರತೀಯ ಸಮಾಜದಲ್ಲಿ ಮಹಿಳೆಗೆ ದೇವತೆಯ ಸ್ಥಾನ ನೀಡಲಾಗಿದೆ ಇಂತಹ ಗೌರವದ ಸ್ಥಾನ ಬೇರೆ ದೇಶಗಳಲ್ಲಿ ಕಾಣುವುದು ಬಹಳ ವಿರಳ."

ಮಹಿಳೆಯರು ಕಾಪಾಡಿಕೊಳ್ಳಬೇಕಾದ ವ್ಯಕ್ತಿತ್ವ ಮತ್ತು ನಿರ್ವಹಿಸಬೇಕಾದ ಪಾತ್ರಗಳನ್ನು ಉದಾಹರಣೆ ಸಹಿತ ಮನೋಜ್ಞವಾಗಿದ್ದ ಅವರ ಮಾತು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿತ್ತು ಎಂದರೆ ಆಕಾಶದಿಂದ ಸೂಜಿ ಬಿದ್ದರೂ ಕೇಳಿಸುತ್ತಿತ್ತು ಎಂದರೆ ಮಾತಿನಲ್ಲಿ ಎಂತಹ ಸಿಹಿ ಹೂರಣ ಅಡಗಿತ್ತು ಎಂಬುದನ್ನು ಊಹಿಸಬಹುದು.

ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಮಾರ್ಚ್ 12 ರಂದು ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ತುಮಕೂರಿನ ಹಿರಿಯ ಸಿವಿಲ್ ನ್ಯಾಯಾಧೀಶೆ ಡಾ. ನೂರುನ್ನೀಸಾ ಮಾತಿಗೆ ಸಭಾಂಗಣ ತಲೆದೂಗಿತ್ತು. ತಮ್ಮ ಬದುಕಿನಲ್ಲಿ ಅನುಭವಿಸಿದ ಕಷ್ಟ, ವೈಯಕ್ತಿಕ ಮತ್ತು ಸಾಂಸಾರಿಕ ಜೀವನದ ಸಾಧನೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಎಂಟು ದಿನದ ಮಗು ಕಟ್ಟಿಕೊಂಡು ಮಂಗಳೂರಿನಲ್ಲಿ ನ್ಯಾಯಾಧೀಶರ ಹುದ್ದೆ ಪರೀಕ್ಷೆ ಬರೆದದ್ದು, ತದನಂತರ ಮಗುವಿಗೆ ಎಂಟು ತಿಂಗಳು ತುಂಬಿದ ನಂತರ ಮಹಿಳಾ ನ್ಯಾಯಾಧೀಶರಾಗಿ ಕೆಲಸಕ್ಕೆ ಸೇರಿದ ಸನ್ನಿವೇಶ, ಕೆಲಸ ಮಾಡುವ ಮಹಿಳೆ ಕಚೇರಿಯಲ್ಲಿ ಹೇಗೆ ನಡೆದುಕೊಳ್ಳಬೇಕು ಮತ್ತು ಮನೆಯಲ್ಲಿ ಯಾವ ರೀತಿಯ ಪಾತ್ರ ನಿರ್ವಹಿಸಬೇಕು, ನಿರ್ವಹಿಸಿದರೆ ಕೌಟುಂಬಿಕ ಸಾಮರಸ್ಯ ಹೇಗಿರುತ್ತದೆ ಎಂಬುದನ್ನು ವಿವರಿಸಿದರು.

"ಸಮಾಜ ನೈತಿಕ ಹಾದಿಯಲ್ಲಿ ಸಾಗಬೇಕಾದರೆ ಕುಟುಂಬವೇ ರೋಲ್ ಮಾಡಲ್ ಆಗಬೇಕು. ಮಹಿಳೆಯರು ಎಲ್ಲಕ್ಕಿಂತ ವೇಗವಾಗಿ ಮತ್ತು ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬುದನ್ನು ಸಾಬೀತುಪಡಿಸುವ ರೀತಿಯಲ್ಲಿ ನಡೆದುಕೊಂಡರೆ ವ್ಯಕ್ತಿತ್ವ, ಘನತೆ–ಗೌರವ ಹೆಚ್ಚಾಗಲಿದೆ. ಮಕ್ಕಳಿಗೆ ತಂದೆ ತಾಯಿಗಳೇ, ರೋಲ್ ಮಾಡಲ್ ಆಗಬೇಕು. ಅಂತಹ ದಿಟ್ಟತನವನ್ನು ಬೆಳೆಸಿಕೊಳ್ಳಬೇಕು. ಮಹಿಳೆಯರು ಕ್ರಿಯಾಶೀಲರಾಗಿ ಜೀವನ ನಡೆಸಲು ಸಕಾರಾತ್ಮಕ ಆಲೋಚನೆ ಮುಖ್ಯ. ಹೀಗಾಗಿ ಪ್ರತಿ ಹಂತದಲ್ಲೂ ನಿಮ್ಮನ್ನು ನೀವು ಗೌರವಿಸುವ ಮತ್ತು ಪ್ರೀತಿಸುವ ಗುಣ ಬೆಳೆಸಿಕೊಂಡರೆ ಸಮಾಜವನ್ನು ಗೌರವಿಸುವ ರೀತಿ–ನೀತಿ ತಾನಾಗಿಯೇ ರೂಪಗೊಳ್ಳುತ್ತದೆ. ಡಾಕ್ಟರ್, ಇಂಜಿನಿಯರ್ ಎಂದು ಬೇರೆ ಕಡೆ ರೋಲ್ ಮಾಡಲ್ ತೋರಿಸುವ ಬದಲು ನಿನ್ನ ಅಪ್ಪನ ಹಾಗೆ, ನಿನ್ನ ತಾಯಿ, ನಿನ್ನ ಮಾವನ ಹಾಗೆ, ದೊಡ್ಡಪ್ಪನ ಹಾಗೆ ಎಂದು ಕುಟುಂಬದ ಸದಸ್ಯರನ್ನೇ ಏಕೆ ರೋಲ್ ಮಾಡಲಾಗಿ ಹೇಳುವುದಿಲ್ಲ" ಎಂದು ಸಭಿಕರನ್ನು ಪ್ರಶ್ನಿಸಿ ಜಾಗೃತಗೊಳಿಸಿದರು.

ಪ್ರತಿಯೊಬ್ಬ ಮಹಿಳೆಯೂ ರಾಜಸ್ತಾನದ ಬನ್ವರಿ ದೇವಿಯ ಹಾದಿಯಲ್ಲಿ ಸಾಗಬೇಕು ಎಂದು ಎಲ್ಲರೂ ಅಭಿಪ್ರಾಯಪಟ್ಟರು. ಲೇಖಕಿ ಬಾ.ಹ. ರಮಾಕುಮಾರಿ ಅವರು ಭಾಗವಹಿಸಿದ್ದರು.

▪ ವರದಿ: ಎನ್.ಆನಂದ್



# ಉನ್ನತ ಶಿಕ್ಷಣದ ನವ ಪರಂಪರೆಗೆ ಕರ್ನಾಟಕ ಮಾದರಿ

ಉನ್ನತ ಶಿಕ್ಷಣಕ್ಕೆ ಭದ್ರ ಅಡಿಪಾಯ, ನವಪರಂಪರೆ ಹಾಕಿದ ಶ್ರೇಯಸ್ಸು ಕರ್ನಾಟಕಕ್ಕೆ ಸಲ್ಲುತ್ತದೆ, ಉನ್ನತ ಶಿಕ್ಷಣ ಸಂಸ್ಥೆಗಳು ದುರ್ಬಲ ಮತ್ತು ಬಡ ಮಕ್ಕಳಿಗೆ ಬಾಗಿಲು ತೆರೆಯಲು ಹಿಂದುಳಿದ ವರ್ಗಗಳ ನಾಯಕ, ಮಾಜಿಮುಖ್ಯಮಂತ್ರಿ ವೀರಪ್ಪ ಮೊಯಿಲಿ ಕೈಗೊಂಡ ದಿಟ್ಟ–ಐತಿಹಾಸಿಕ ತೀರ್ಮಾನ. ಸುವರ್ಣಾಕ್ಷರದಲ್ಲಿ ಬರೆದ ಅಧ್ಯಾಯವಾಗಿದೆ. ಅವರ ದೂರದೃಷ್ಟಿಯಿಂದಾಗಿ ಇಂದು ಲಕ್ಷಾಂತರ ಬಡಮಕ್ಕಳು, ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಮಕ್ಕಳು (ಒಬಿಸಿ) ಡಾಕ್ಟರ್ ಮತ್ತು ಇಂಜಿನಿಯರ್‌ಗಳಾಗಿ ರಾಜ್ಯದ ಅಭಿವೃದ್ಧಿಗೆ, ಕೀರ್ತಿಗೆ ಕಾರಣರಾಗಿದ್ದಾರೆ ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್ ಹುಲಿನಾಯ್ಕರ್ ಹೇಳಿದರು.

ಮಾರ್ಚ್ 21ರಂದು ಶ್ರೀದೇವಿ ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ ಸಂಘದ ನೂತನ ಸದಸ್ಯರಾಗಿ ಆಯ್ಕೆಯಾದ ಡಾ. ರಮಣ್ ಹುಲಿನಾಯ್ಕರ್ ಅವರಿಗೆ ಕಾಲೇಜು ಸಿಬ್ಬಂದಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಕಾಲೇಜು ಸಿಬ್ಬಂದಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ರಮಣ್ ಎಂ. ಹುಲಿನಾಯ್ಕರ್ "ಕರ್ನಾಟಕದ ಸಿಇಟಿ ವ್ಯವಸ್ಥೆ ದೇಶಕ್ಕೆ ಮಾದರಿಯಾಗಿದೆ ಎಂದು ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಶಿಕ್ಷಣ ಮತ್ತು ಹೆಲ್ತ್‌ಕೇರ್ ವಲಯದಲ್ಲಿ ಉಳಿದೆಲ್ಲ ರಾಜ್ಯಗಳಿಗಿಂತ ಕನಾಟಕವು ಮುಂಚೂಣಿಯಲ್ಲಿದೆ. ಪ್ರತಿಷ್ಠಿತ ಸಂಸ್ಥೆಗೆ ತಮ್ಮನ್ನು ಆಯ್ಕೆ ಮಾಡಿದ್ದು, ಎಲ್ಲರ ಸಲಹೆ, ಅಭಿಪ್ರಾಯ ಕ್ರೋಡಿಕರಿಸಿ, ವಿಶ್ವಾಸದಿಂದ, ಅವರ ನಂಬಿಕೆ ಹುಸಿಯಾಗದಂತೆ ಕಾರ್ಯನಿರ್ವಹಿಸುವ ಭರವಸೆ ನೀಡಿದರು. ರಾಜ್ಯದಲ್ಲಿ 180 ಹೆಚ್ಚು ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು ಗುಣಮಟ್ಟ ಸುಧಾರಣೆಗೆ, ವಿಶೇಷವಾಗಿ ವಿದ್ಯಾರ್ಥಿಗಳ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು" ಎಂದರು.

ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ ಸಂಘ ತುಮಕೂರಿನಲ್ಲಿ ಮೊದಲ ಕೌಶಲ ಕೇಂದ್ರ ತೆರೆಯಲು ನಿರ್ಧಾರ ಮಾಡಿದ್ದು ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ಕಾಲೇಜು ಪದವಿ ಮುಗಿಸುವ ವೇಳೆಗೆ ಅಗತ್ಯ ಕೌಶಲಗಳನ್ನು ಮೈಗೂಡಿಸಿಕೊಂಡು ಹೊರಬರುವುದರಿಂದ ಉದ್ಯೋಗದ ಅವಕಾಶಗಳು ತಾನಾಗಿ ಅರಸಿಕೊಂಡು ಬರುತ್ತವೆ. ಇದಕ್ಕಾಗಿ ತಮ್ಮ ಸಂಸ್ಥೆಯನ್ನು ಆಯ್ಕೆ ಮಾಡಿದ್ದಾಕ್ಕಾಗಿ ಡಾ. ರಮಣ್ ಧನ್ಯವಾದಗಳನ್ನು ಅರ್ಪಿಸಿದರು.

ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಟ್ರಸ್ಟಿಗಳಾದ ಡಾ. ಲಾವಣ್ಯ, ಅಂಬಿಕಾ ಎಂ. ಹುಲಿನಾಯ್ಕರ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಎಲ್ ಹರೇಂದ್ರಕುಮಾರ್, ಉಪಪ್ರಾಂಶುಪಾಲೆ ಡಾ. ರೇಖಾಗುರುಮೂರ್ತಿ ಮತ್ತು ಕಾಲೇಜಿನ ವಿವಿಧ ವಿಭಾಗದ ಪ್ರಾಂಶುಪಾಲರು ಉಪಸ್ಥಿತರಿದ್ದರು.

▪ ವರದಿ: ಎನ್.ಆನಂದ್

# ತಿರುಚಿರಾಪಳ್ಳಿ, ಶ್ರೀರಂಗಂ ಮತ್ತು ತಂಜಾವೂರು

ತಿರುಚಿರಾಪಳ್ಳಿ ತಮಿಳುನಾಡಿನ ನಾಲ್ಕನೆಯ ದೊಡ್ಡ ನಗರವೆಂದು ಖ್ಯಾತವಾಗಿದೆ. 2011ರ ಜನಗಣತಿಯ ಪ್ರಕಾರ ತಿರುಚಿರಾಪಳ್ಳಿಯಲ್ಲಿದ್ದ ಜನಸಂಖ್ಯೆ 8,47,387. ಈ ನಗರ ಕಾವೇರಿ ನದಿಯ ದಂಡೆಯ ಮೇಲಿದೆ. ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದಲೂ ಈ ಪಟ್ಟಣ ಅಸ್ತಿತ್ವದಲ್ಲಿತ್ತೆಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ. ತಿರುಚಿರಾಪಳ್ಳಿಯ ಬೆಟ್ಟ 3.8 ಬಿಲಿಯನ್ ವರ್ಷದಷ್ಟು ಹಳೆಯದೆಂದು ಹೇಳಲಾಗುತ್ತದೆ. ಈ ಬೆಟ್ಟದ ಮೇಲೆ ಶ್ರೀವಿನಾಯಕದೇವರ ದೇವಸ್ಥಾನವಿದೆ. ದೇವರ ದರ್ಶನವನ್ನು ಮಾಡಲು 400 ಮೆಟ್ಟಲುಗಳನ್ನು ಹತ್ತಿಕೊಂಡು ಹೋಗಬೇಕು. ತಿರುಚಿರಾಪಳ್ಳಿಯು ಜಿಲ್ಲಾಕೇಂದ್ರ. ಇದನ್ನು ಕೈಗಾರಿಕಾನಗರ ಮತ್ತು ಶೈಕ್ಷಣಿಕನಗರ ಎಂದೂ ಕರೆಯಲಾಗುತ್ತದೆ. ಅದೇ ರೀತಿ ಪ್ರಾಚೀನ ದೇವಾಲಯಗಳ ತಾಣವಾದ ಇದನ್ನು 'ಸಂಸ್ಕೃತಿಯ ಕೇಂದ್ರವೆಂದು' ಬಣ್ಣಿಸಲಾಗುತ್ತದೆ.

ಪ್ರಾರಂಭದಲ್ಲಿ ಈ ಪ್ರದೇಶವನ್ನು ಚೋಳರು ಆಳುತ್ತಿದ್ದರು. ನಂತರ ಪಲ್ಲವರು, ಪಾಂಡ್ಯರು ಆಳಿದರು. ಕ್ರಿ.ಶ. 1225ರಲ್ಲಿ ಹೊಯ್ಸಳರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ. ಅಲ್ಲಾವುದ್ದೀನ್‌ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್ ಈ ಪ್ರದೇಶದ ಮೇಲೆ ದಾಳಿ ಮಾಡಿ ಇಲ್ಲಿನ ದೇವಾಲಯಗಳಿಗೆ ಹಾನಿ ಮಾಡಿದ. ಮುಸ್ಲಿಂ ದೊರೆಗಳ ಆಳ್ವಿಕೆಯಿಂದ ಈ ಪ್ರದೇಶವನ್ನು ಬಿಡುಗಡೆ ಮಾಡಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಮಧುರೈನ ನಾಯಕರೂ ಈ ನಗರವನ್ನು ಆಳಿದ್ದಾರೆ. ಅವರು ಸ್ವಲ್ಪಕಾಲ ಇದನ್ನು ತಮ್ಮ ರಾಜಧಾನಿಯನ್ನು ಮಾಡಿಕೊಂಡಿದ್ದರು. ಮಧುರೈ ಸುಲ್ತಾನ್ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಹೈದರಾಬಾದಿನ ನಿಜಾಮ, ಮೈಸೂರಿನ ಹೈದರಾಲಿ ಮತ್ತು ಟಿಪ್ಪುಸುಲ್ತಾನ್‌ರು ಸಹ ಈ ಪ್ರದೇಶವನ್ನು ಆಳಿದ್ದಾರೆ. 1801ರಲ್ಲಿ ಈ ಪ್ರದೇಶ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಅಲ್ಲಿಂದ ಈಚೆಗೆ ಈ ಪ್ರದೇಶದ ಅಭಿವೃದ್ಧಿ ಏಕಪ್ರಕಾರವಾಗಿ ನಡೆದುಕೊಂಡು ಬಂದಿದೆ.

ಮೇಲೆ ಹೇಳಿರುವ ಹಾಗೆ, ತಿರುಚಿರಾಪಳ್ಳಿಯು ಶೈಕ್ಷಣಿಕ ಮತ್ತು ಕೈಗಾರಿಕಾನಗರವೆಂದು ಪ್ರಸಿದ್ಧವಾಗಿದೆ. 'ನ್ಯಾಷನಲ್‌ಇನ್ಸಿಟ್ಯೂಟ್‌ಆಫ್‌ಟೆಕ್ನಾಲಜಿ' (National Institite of Techonology, (NIT-T ) 'ಇಂಡಿಯನ್‌ಇನ್ಸಿಟ್ಯೂಟ್‌ಆಫ್ ಮ್ಯಾನೇಜ್ಮೆಂಟ್' (ಐ.ಐ.ಎಂ) (Indian Institute of Mangement - IIM) 'ತಮಿಳುನಾಡಿನ ಕಾನೂನು ವಿಶ್ವವಿದ್ಯಾಲಯ'. 'ತಮಿಳುನಾಡಿನ ಸರ್ಕಾರಿ ವೈದ್ಯಕೀಯ ಕಾಲೇಜು' ಮೊದಲಾದ ಪ್ರತಿಷ್ಠಿತ ಸಂಸ್ಥೆಗಳು ಈ ನಗರದಲ್ಲಿಇವೆ.

ಈ ನಗರದಲ್ಲಿ ಬಿ.ಎಚ್.ಇ.ಎಲ್.(B.H.E.L) ಹಾಗೂ High Engergy Equipment and Fabricatition Factory (H.E.P.F) ಮೊದಲಾದ ಬೃಹತ್ ಕೈಗಾರಿಕೆಗಳಿವೆ. ಅಲ್ಲದೆ ಇದನ್ನು ತಮಿಳುನಾಡಿನ 'ಅಮೃತ ಸ್ಮಾರ್ಟ್ ಸಿಟೀಸ್' (Amrut Smart Cities in Tamilnadu) ಎಂದು ಕರೆಯುತ್ತಾರೆ. ತಿರುಚಿರಾಪಳ್ಳಿಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಬ್ರಿಟಿಷರು ಈ ಪ್ರದೇಶವನ್ನು 'ತಿರುಚಿ' ಎನ್ನುತ್ತಿದ್ದರು. ತಿರುಚಿರಾಪಳ್ಳಿಯನ್ನು 'ಪವಿತ್ರವಾದ ಸ್ಥಳ ಅಥವಾ ಬಂಡೆಯ ಊರು' ಎಂದೂ ಕರೆಯಲಾಗುತ್ತದೆ.

ಇಂತಹ ಮಹತ್ವದ ನಗರದಲ್ಲಿ 2025ರ ಜನವರಿ 28ರಂದು ಅಖಿಲ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಾಂಬೂರಿ ಉತ್ಸವವನ್ನು ಏರ್ಪಡಿಸಲಾಗಿತ್ತು. 'ಭಾರತ್ ಮತ್ತು ಸ್ಕೌಟ್ಸ್‌ನ ಸುವರ್ಣ ಮಹೋತ್ಸವದ' ಸಂದರ್ಭದಲ್ಲಿ ಹಮ್ಮಿಕೊಂಡ ಈ ಜಾಂಬೂರಿ ಉತ್ಸವಕ್ಕೆ ಕರ್ನಾಟಕದಿಂದ ಮಾಜಿ ಸಚಿವರು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುಖ್ಯ ಆಯುಕ್ತರಾದ ಪಿ.ಜಿ.ಆರ್. ಸಿಂಧ್ಯ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಮೋಹನ್‌ಕೊಂಡಜ್ಜಿ, ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಮತ್ತು ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ



ಡಾ.ಎಂ.ಆರ್. ಹುಲಿನಾಯ್ಕರ್ ಹಾಗೂ ಲೇಖಕರಾದ ಡಾ.ಕೆ.ಆರ್. ಕಮಲೇಶ್‌ಅವರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಅವರುಗಳು ಜಾಂಬೂರಿ ಉತ್ಸವದಲ್ಲಿ ಪಾಲುಗೊಂಡ ಅನಂತರ ಅಲ್ಲಿದ್ದ ಕೆಲವು ದೇವಾಲಯಗಳಿಗೆ ಭೇಟಿ ನೀಡಿದ್ದರು.

ಇದೊಂದು ಪೂರ್ವನಿಯೋಜಿತವಲ್ಲದ ಭೇಟಿಯಾಗಿತ್ತು. ಅಲ್ಲಿನ ಮಾರ್ಗದರ್ಶಕರು ಹೇಳಿದ ವಿಚಾರಗಳನ್ನು ಮನನ ಮಾಡಿಕೊಂಡು ಅದನ್ನು ಓದುಗರ ಮುಂದೆ ಇಡುತ್ತಿದ್ದೇನೆ. ಈ ಭೇಟಿಯಲ್ಲಿ ಇವರಿಗೆ ಸಹಾಯ ಮಾಡಿದ ಚಾಲಕರು ಹಾಗೂ ಮಾರ್ಗದರ್ಶಕರಾದ ಬಾಲಮುರುಗನ್‌ಅವರಿಗೆ ತಂಡವು ವಿಶೇಷವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

**ಶ್ರೀರಂಗಂನಲ್ಲಿ ಪವಡಿಸಿರುವ ಶ್ರೀರಂಗನಾಥಸ್ವಾಮಿ**

ಶ್ರೀರಂಗಂ ತಿರುಚಿರಾಪಳ್ಳಿಯಿಂದ 12ಕಿಲೋಮೀಟರ್ ದೂರದಲ್ಲಿದೆ. ಇಲ್ಲಿರುವ ಶ್ರೀರಂಗನಾಥಸ್ವಾಮಿ ಮಹಾವಿಷ್ಣುವಿನ ಮತ್ತೊಂದು ಸ್ವರೂಪ, ಹಾಗೆಯೇ ಶ್ರೀಮಹಾಲಕ್ಷ್ಮಿಯ ಮತ್ತೊಂದು ಸ್ವರೂಪ ರಂಗನಾಯಕಿ. ದೇವರ ಈ ಎರಡು ವಿಗ್ರಹಗಳು ಬಹಳ ಮುದ್ದಾಗಿವೆ. ಮಲಗಿರುವ ಭಂಗಿಯಲ್ಲಿರುವ ಶ್ರೀರಂಗನಾಥಸ್ವಾಮಿಯನ್ನು ಮೂರು ಬಾಗಿಲಿನ ಮೂಲಕ ನೋಡಬೇಕು.

ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯನ್ನು 'ಆದಿರಂಗ'ನೆಂದು, ಚಾಮರಾಜನಗರಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶಿವನಸಮುದ್ರದಲ್ಲಿ ಶ್ರೀರಂಗನಾಥಸ್ವಾಮಿಯನ್ನು 'ಮಧ್ಯರಂಗ' ಎಂದು ಶ್ರೀರಂಗಂನಲ್ಲಿರುವ ಶ್ರೀರಂಗನಾಥಸ್ವಾಮಿಯನ್ನು 'ಅಂತ್ಯರಂಗ'ನೆಂದು ಕರೆಯುತ್ತಾರೆ. ಧಾರ್ಮಿಕ ಯಾತ್ರೆ ಮಾಡುವವರು ಒಂದೇ ದಿನ ಈ ಮೂರೂ ಕ್ಷೇತ್ರಗಳನ್ನು ಸಂದರ್ಶಿಸಬೇಕೆಂಬ ಸಂಪ್ರದಾಯವಿದೆ. ಭಕ್ತರು ಅದನ್ನು ಭಯ, ಭಕ್ತಿಗಳಿಂದ ಅನುಸರಿಸುತ್ತಾರೆ.

ಶ್ರೀರಂಗಂನಲ್ಲಿ ರಂಗನಾಥಸ್ವಾಮಿ ಮತ್ತು ಲಕ್ಷ್ಮಿದೇವಿಯ ಒಂದು ರೂಪವಾದ ರಂಗನಾಯಕಿಯ ದೇವಸ್ಥಾನಗಳಿವೆ. ಈ ದೇವಾಲಯ ದ್ರಾವಿಡಶೈಲಿಯಲ್ಲಿದೆ. ಶ್ರೀವೈಷ್ಣವ ಸಂಪ್ರದಾಯವನ್ನು ಈ ದೇವಾಲಯವು ಪ್ರತಿನಿಧಿಸುತ್ತದೆ. ವಿಶ್ವದ ಅತ್ಯಂತ ಪ್ರಸಿದ್ಧ ವೈಷ್ಣವ ದೇವಾಲಯವಾದ ಇದು ಯುನೆಸ್ಕೋ ದಿಂದ ಮಾನ್ಯತೆ ಪಡೆದ ತಮಿಳುನಾಡಿನ ಮೊದಲ ದೇವಾಲಯ. ಈ ದೇವಾಲಯ 155 ಎಕರೆಗಳಲ್ಲಿ ವ್ಯಾಪಿಸಿದೆ. ಇದರಲ್ಲಿ 50ಕ್ಕೂ ಹೆಚ್ಚಿನ ದೇವಾಲಯಗಳಿವೆ, 21 ಗೋಪುರ ಮತ್ತು 39 ಮಂಟಪಗಳಿವೆ. ದಕ್ಷಿಣ ಭಾರತದ ಸಾಮಾಜಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವೆಂದು ಶ್ರೀರಂಗಂ ಪ್ರಸಿದ್ಧವಾಗಿದೆ. ಈ ದೇವಾಲಯವನ್ನು ತಮಿಳಿನಲ್ಲಿ 'ಪೆರಿಯಕೋವಿಲ್' (ದೊಡ್ಡ ದೇವಾಲಯ) ಎನ್ನುತ್ತಾರೆ.

ಇಲ್ಲಿ ಶ್ರೀರಂಗಸ್ವಾಮಿಯು ಆದಿಶೇಷನನ್ನೇ ಹಾಸಿಗೆಯನ್ನಾಗಿಸಿಕೊಂಡು ಅವನ ಮೇಲೆ



ಪವಡಿಸಿದ್ದಾನೆ. ಅವನ ಮುಂದೆ ಅವನ ಉತ್ಸವ ಮೂರ್ತಿಗಳಿದ್ದು, ಎಡಬಲದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದಾರೆ. ಶ್ರೀರಂಗಂನ ರಂಗನಾಥ ದಕ್ಷಿಣಕ್ಕೆ ಮುಖ ಮಾಡಿದ್ದಾನೆ. ಅವನ ದೇಹವು ಪೂರ್ವ-ಪಶ್ಚಿಮಅಕ್ಷಕ್ಕೆ ಜೋಡಿಸಲ್ಪಟ್ಟಿದೆ. 'ಶ್ರೀರಂಗಂ ಮಹಾತ್ಮೆಯುಂ' ಕಾವ್ಯದಲ್ಲಿ ಶ್ರೀರಂಗನನ್ನು ಕುರಿತಾದ ಪೌರಾಣಿಕ ಮತ್ತು ಕೆಲವು ಐತಿಹಾಸಿಕ ಮಾಹಿತಿಗಳಿವೆ.

ಶ್ರೀರಂಗಸ್ವಾಮಿಯ ಇರುವಿಕೆಯನ್ನು ರಾಮಾಯಣ, ಮಹಾಭಾರತ ಕಾಲದಿಂದಲೂ ಕಾಣಬಹುದು. ಶ್ರೀವೈಷ್ಣವ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರು (ಕ್ರಿ.ಶ. 1017 ರಿಂದ 1137) ಮತ್ತು ಅವರ ಗುರುಗಳಾದ ಯಾಮುನಾಚಾರ್ಯರಿಗೆ ಸಂಬಂಧಪಟ್ಟ ಅನೇಕ ಐತಿಹಾಸಿಕ ಸಂಗತಿಗಳು ಶ್ರೀರಂಗಂನ ದೇವಾಲಯದಲ್ಲಿ ದೊರೆಯುತ್ತವೆ. ಈ ದೇವಾಲಯದಲ್ಲಿ, ಚೋಳರ ಕಾಲದ ಶಾಸನಗಳೂ ಸೇರಿದಂತೆ ಸುಮಾರು 800 ಶಾಸನಗಳಿವೆ. ಈ ಶಾಸನಗಳು ಸಂಸ್ಕೃತ, ತಮಿಳು, ಕನ್ನಡ, ತೆಲುಗು, ಮರಾಠಿ, ಹಾಗೂ ಒಡಿಯಾ ಭಾಷೆಯಲ್ಲಿವೆ.

ಪ್ರಾರಂಭದಲ್ಲಿ ಈ ದೇವಾಲಯವು ಮೊದಲ ಚೋಳರ ದೊರೆ ಧರ್ಮವರ್ಮನಿಂದ ನಿರ್ಮಿಸಲ್ಪಟ್ಟಿತು. ಅನಂತರ ಕಾವೇರಿ ಪ್ರವಾಹಕ್ಕೆ ಸಿಲುಕಿ ಈ ದೇವಸ್ಥಾನ ನಾಶವಾಯಿತು. ಈ ದೇವಾಲಯದ ಸಂಕೀರ್ಣವನ್ನು ಚೋಳರ ಕಿಲ್ಲಿವಲವನ್ ಎನ್ನುವ ದೊರೆ ಪುನರ್ ನಿರ್ಮಾಣ ಮಾಡಿದ್ದನು. ಚೋಳರ ಅನಂತರ ಪಾಂಡ್ಯರು, ಹೊಯ್ಸಳರ ಇಮ್ಮಡಿ ವೀರಬಲ್ಲಾಳ (ಕ್ರಿ.ಶ. 1210), ಮರಾಠರು ಈ ದೇವಸ್ಥಾನಕ್ಕೆ ದತ್ತಿಕೊಟ್ಟಿದ್ದಾರೆ. ವಿಜಯನಗರದ ದೊರೆಗಳ ಕಾಲದಲ್ಲಿ ಈ ದೇವಸ್ಥಾನವು ತನ್ನ ಹಿಂದಿನ ವೈಭವವನ್ನು ಮತ್ತೆ ಪಡೆಯಿತು.

ಈ ದೇವಾಲಯದಲ್ಲಿದ್ದ ಚಿನ್ನದ ವಿಗ್ರಹವನ್ನು ದೆಹಲಿ ಸುಲ್ತಾನರು ತೆಗೆದುಕೊಂಡು ಹೋಗಿದ್ದರು. ಇಲ್ಲಿದ್ದ ಬಾಲಕೃಷ್ಣ ವಿಗ್ರಹವನ್ನು ಸುಲ್ತಾನರ ಮಗಳು ತನ್ನ ಬಳಿಯೇ ಇಟ್ಟುಕೊಂಡು ಆರಾಧನೆ ಮಾಡುತ್ತಿದ್ದಳೆಂದು ಮತ್ತು ಅದನ್ನೇ ಪ್ರೀತಿಸುತ್ತಿದ್ದಳೆಂಬ ಕತೆಯೊಂದಿದೆ. ಅವಳನ್ನು ಮತ್ತು ಸುಲ್ತಾನನನ್ನು ಒಪ್ಪಿಸಿ ಈ ವಿಗ್ರಹವನ್ನು ಯತಿಯೊಬ್ಬರು ಇಲ್ಲಿಗೆ ತಂದು ಪುನರ್ ಪ್ರತಿಷ್ಠಾಪನೆ ಮಾಡಿದರು ಎನ್ನಲಾಗುತ್ತದೆ. ಈ ದೇವಾಲಯದ ಒಳಗೆ ಹಲವು ಚಿಕ್ಕಚಿಕ್ಕ ಜಲಮೂಲಗಳಿವೆ.

ಶ್ರೀವೈಷ್ಣವ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ದೇವಾಲಯವೂ ಇಲ್ಲಿದ್ದು ಅವರಿಗೆ ನಿತ್ಯ ಪೂಜೆ ನಡೆಯುತ್ತದೆ. ಈ ಸ್ಥಳದಲ್ಲಿ ರಾಮಾನುಜಾಚಾರ್ಯರ ದೇಹವನ್ನಿಡಲಾಗಿತ್ತು ಎಂದು ಹೇಳಲಾಗುತ್ತದೆ. ರಾಮಾನುಜಾಚಾರ್ಯರು, ತಮ್ಮ ಗುರುಗಳ ಆಜ್ಞೆಯನ್ನೂ ಮೀರಿ, ತಾವು ಗುರುವಿನಿಂದ ಕಲಿತ ಪವಿತ್ರಮಂತ್ರವನ್ನು ಜನರಿಗೆ ಬೋಧಿಸುತ್ತಾರೆ. 'ಯಾವ ಮಂತ್ರಕ್ಕೂ ಮಡಿಯಿಲ್ಲ, ಹುಟ್ಟಿದ ಎಲ್ಲಾ ಜೀವಿಗಳೂ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬಹುದು' ಎಂದು ರಾಮನುಜರು ಘೋಷಿಸಿದ ಸ್ಥಳ ಶ್ರೀರಂಗಂ.

ಶ್ರೀರಂಗಂನ ದೇವಾಲಯವನ್ನು 'ದಕ್ಷಿಣಗಂಗೆ' ಎಂದು ಕರೆಯಲಾಗುವ ಕಾವೇರಿ ನದಿಯು ಸುತ್ತುವರಿದಿದ್ದು, ಶ್ರೀರಂಗನಾಥಸ್ವಾಮಿ ದ್ವೀಪದಲ್ಲಿರುವಂತೆ ಕಾಣುತ್ತದೆ. ಇದರಿಂದ ದೇವಾಲಯಕ್ಕೂ ಸ್ವಲ್ಪ ರಕ್ಷಣೆಯೂ ದೊರಕಿದೆ.

ವಿಷ್ಣು, ಶ್ರೀರಾಮ, ಕೃಷ್ಣ ಮೊದಲಾದ ವಿಷ್ಣುವಿನ ಮಹಿಮೆಯನ್ನು ತಿಳಿಸುವ ಉಬ್ಬು ಶಿಲ್ಪಗಳು ಒಳಾಂಗಣದಲ್ಲಿ ಇವೆ. ಇಲ್ಲಿನ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತ ಮತ್ತು ಭಾಗವತದ ಕತೆಯನ್ನು ತಿಳಿಸುವ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಸಾವಿರಕಂಬದ ಸಭಾಮಂಟಪವಿದೆ. ಶ್ರೀರಂಗನಾಥಸ್ವಾಮಿಯ ದೇವಾಲಯ ಪ್ಲಾನಿಮೆಟ್ರಿಕ್ ಪದ್ಧತಿಯಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಜಾರ್ಜ್ ಮಿಷೆಲ್ ಬರೆದಿದ್ದಾರೆ.


ಶ್ರೀರಂಗಂನ ದೇವಾಲಯದ ಒಳಗೆ ಐವತ್ತಕ್ಕೂ ಹೆಚ್ಚಿನ ದೇವಾಲಯಗಳಿವೆ. ಶ್ರೀರಂಗನಾಥನ ಜೊತೆ ಚಕ್ರೇಶ್ವರ, ನರಸಿಂಹ, ಶ್ರೀರಾಮ, ಹಯಗ್ರೀವ, ವಾಸುದೇವ, ವರದರಾಜ, ಶ್ರೀನಿವಾಸ ಮತ್ತು ಗೋಪಾಲಕೃಷ್ಣರ ಆಲಯಗಳಿವೆ. ಇವೆಲ್ಲವೂ ಮಹಾವಿಷ್ಣುವಿನ ವಿವಿಧ ರೂಪಗಳು.

ಈ ದೇವಾಲಯದ ಗೋಪುರ ಏಷ್ಯಾದಲ್ಲಿಯೇ ಅತಿ ಎತ್ತರದ ಗೋಪುರವೆಂದು ಖ್ಯಾತವಾಗಿದೆ. ಒಟ್ಟು 21 ಗೋಪುರಗಳಿವೆ. 13 ಹಂತದ ರಾಜಗೋಪುರವನ್ನು ಕ್ರಿ.ಶ. 1500ರಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲಾಗಿದೆ. ರಾಜಗೋಪುರದ ಮೇಲೆ ಹೊಳೆಯುವ 135 ಕೆ.ಜಿ. ತೂಕದ ತಾಮ್ರದ ಕಳಶವಿದೆ.

ಶ್ರೀರಂಗನಾಥಸ್ವಾಮಿಯನ್ನು ಕುರಿತು 12 ಆಳ್ವಾರರು 300 ವರ್ಷಗಳ ಕಾಲ ವಿವಿಧ ಕಾಲ ಘಟ್ಟದಲ್ಲಿ ಹಾಡಿದ ನಾಲ್ಕುಸಾವಿರ ಸ್ತೋತ್ರಗಳ ಸಂಗ್ರಹವನ್ನು ನೋಡಬಹುದು. ತಮಿಳುನಾಡಿನ ಪ್ರಸಿದ್ಧ ಕವಿ ಕಂಬ ತನ್ನ ರಾಮಾಯಣಕಾವ್ಯವನ್ನು ರಚಿಸಿದ ಮೇಲೆ ಇಲ್ಲಿಗೆ ಬಂದು ಶ್ರೀರಂಗನಾಥನ ಮುಂದೆ ಅದನ್ನು ವಾಚನ ಮಾಡಿದನೆಂದು ಹೇಳಲಾಗುತ್ತದೆ. ಶ್ರೀರಾಮಾನುಜಾಚಾರ್ಯರು 'ಶರಣಾಗತಿಗದ್ಯಂ,' 'ಶ್ರೀರಂಗಂಗದ್ಯಂ' ಮತ್ತು 'ವೈಕುಂಠಗದ್ಯಂ' ಎಂದು ಕರೆಯಲ್ಪಡುವ 'ಗದ್ಯತ್ರಯ' ಕೃತಿಯನ್ನು ರಚಿಸಿದ್ದರು.

ತೀರ್ಥಯಾತ್ರೆಯ ದೃಷ್ಟಿಯಿಂದ ವಿಷ್ಣುವಿನ ಎಂಟು ಪವಿತ್ರಕ್ಷೇತ್ರಗಳಲ್ಲಿ ಶ್ರೀರಂಗಂ ಒಂದೆಂದು ಮಾನ್ಯ ಮಾಡಲಾಗುತ್ತದೆ. ಸಮಾಜ ಸುಧಾರಕರು ಮತ್ತು ಶ್ರೀವೈಷ್ಣವ ಪಂಥದ ಸ್ಥಾಪಕರಾದ ರಾಮಾನುಜಾಚಾರ್ಯರು ಶ್ರೀರಂಗಂ ಧಾರ್ಮಿಕಕೇಂದ್ರದ ಮುಖ್ಯ ಯತಿಗಳಾಗಿದ್ದರು. ಅನಂತರ ಈ ಪರಂಪರೆಯಲ್ಲಿ ಅನೇಕ ಯತಿಗಳು ಬಂದು ಜನರಿಗೆ ಧಾರ್ಮಿಕ ವಿಚಾರಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಶ್ರೀರಂಗಂನ ದೇವಾಲಯವು ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕಕೇಂದ್ರವಾಗಿ ಬೆಳಗುತ್ತಾ ಬಂದಿದೆ.

**ಪಂಚಭೂತಗಳ ಪ್ರತಿನಿಧಿ: ಜಂಬುಕೇಶ್ವರ ದೇವಾಲಯ**



ಭಾರತದ ಪ್ರಮುಖ ಐದು ಶಿವ ದೇವಾಲಯಗಳಲ್ಲಿ ಜಂಬುಕೇಶ್ವರ ದೇವಾಲಯವು ಒಂದಾಗಿದೆ. 1800 ವರ್ಷಗಳ ಹಿಂದೆ ಈ ದೇವಾಲಯ ನಿರ್ಮಾಣವಾಗಿದೆ ಎಂದು ಸ್ಥಳಪುರಾಣ ಹೇಳುತ್ತದೆ. ಪ್ರಕೃತಿಯ ಐದು ಅಂಶಗಳ ಮೇಲೆ ಈ ಶಿವದೇವಾಲಯ ನಿರ್ಮಾಣವಾಗಿದೆ. ಪಂಚಭೂತಗಳಾದ ಆಕಾಶ, ವಾಯು, ಜಲ, ಅಗ್ನಿ ಮತ್ತು ಭೂಮಿಗಳನ್ನು ಈ ದೇವಾಲಯವು ಪ್ರತಿನಿಧಿಸುತ್ತದೆ. ತಮಿಳು ಭಾಷೆಯಲ್ಲಿ ಇದನ್ನು ನೀರಿನ ದೇವಸ್ಥಾನವೆಂದೂ ಕರೆಯುತ್ತಾರೆ. ಗರ್ಭಗುಡಿಯಲ್ಲಿ ಭೂಗತ ಹೊಳೆಯೊಂದಿದೆ.

ಒಮ್ಮೆ ಪಾರ್ವತಿಯು ಲೋಕದ ಹಿತಕ್ಕಾಗಿ ಪರಶಿವನ ತಪಸ್ಸನ್ನು ಅಪಹಾಸ್ಯ ಮಾಡಿದಳೆಂದು ಅದಕ್ಕಾಗಿ ಪರಶಿವ ಆಕೆಯನ್ನು ಭೂಲೋಕಕ್ಕೆ ಹೋಗುವಂತೆ ಸೂಚಿಸುತ್ತಾನೆ. ಆಕೆ ಕಾವೇರಿಯ ತೀರಕ್ಕೆ ಬಂದು ಅಖಿಲಾಂಡೇಶ್ವರಿ ರೂಪದಲ್ಲಿದ್ದು ಜಂಬುವನದಲ್ಲಿ ಲಿಂಗವೊಂದನ್ನು ಪ್ರತಿಷ್ಠಾಪನೆ

ಮಾಡಿ, ಶಿವನ ಪೂಜೆ ಪ್ರಾರಂಭಿಸುತ್ತಾಳೆ. ಅದನ್ನು 'ಅಪ್ಪುಲಿಂಗ' ಎನ್ನುತ್ತಾರೆ ಎಂದರೆ ನೀರಿನ ಲಿಂಗ ಎಂದರ್ಥ. ಕೊನೆಗೆ ಪರಶಿವನು ಅಖಿಲಾಂಡೇಶ್ವರಿಗೆ ದರ್ಶನವನ್ನು ನೀಡಿ ಶಿವಜ್ಞಾನವನ್ನು ಬೋಧಿಸುತ್ತಾನೆ. ಪಶ್ಚಿಮಾಭಿಮುಖವಾಗಿ ನಿಂತಿದ್ದ ಅಖಿಲಾಂಡೇಶ್ವರಿಗೆ ಪೂರ್ವಾಭಿಮುಖವಾಗಿ ನಿಂತು ಪರಶಿವನು ಉಪದೇಶ ಮಾಡುತ್ತಾನೆ.

ಶಿವಗಣಗಳಾದ ಮೌಲ್ಯವಾನ್ ಹಾಗೂ ಪುಷ್ಪದಂತ ಎನ್ನುವವರು ಕೈಲಾಸದಲ್ಲಿ ಪರಸ್ಪರ ಜಗಳವಾಡಿದ ಕಾರಣ ಅವರಿಗೆ ಶಿವ ಶಾಪವನ್ನು ನೀಡುತ್ತಾನೆ. ಅವರು ಆನೆ ಮತ್ತು ಜೇಡಗಳ ರೂಪದಲ್ಲಿ ಭೂಲೋಕದಲ್ಲಿ ಹುಟ್ಟುತ್ತಾರೆ. ಅವರು ಪ್ರಾಣಿಗಳಾಗಿ ಜನಿಸಿದ್ದರೂ ಶಿವಪೂಜೆಯನ್ನು ಬಿಡುವುದಿಲ್ಲ. ಅವರ ಭಕ್ತಿ ಮತ್ತು ನಿಷ್ಠೆಗಳನ್ನು ಮೆಚ್ಚಿ ಶಿವ ಅವರಿಗೆ ಶಾಪ ವಿಮೋಚನೆ ಮಾಡಿದನೆಂದು ಸ್ಥಳ ಪುರಾಣ ಹೇಳುತ್ತದೆ. ಚೋಳರಾಜನ ಆನೆಯೊಂದು ನಗರ ಪ್ರವೇಶಕ್ಕೆ ಒಪ್ಪದ ಕಾರಣ ಆ ಸ್ಥಳದಲ್ಲಿ ವಿಶೇಷತೆ ಇದೆ ಎಂದು ಮನಗಂಡಾಗ ಅಲ್ಲಿ ಶಿವನ ಸಾನಿಧ್ಯವಿರುವುದು ತಿಳಿದುಬರುತ್ತದೆ. ಅಲ್ಲಿ ಶಿವಲಿಂಗದ ಪ್ರತಿಷ್ಠಾಪನೆ ನಡೆಯುತ್ತದೆ.

ಈ ದೇವಾಲಯದಲ್ಲಿ ಅಖಿಲಾಂಡೇಶ್ವರಿ ವಿದ್ಯಾರ್ಥಿನಿಯ ರೂಪದಲ್ಲಿ ಮತ್ತು ಪರಶಿವ ಗುರುವಿನ ರೂಪದಲ್ಲಿರುವದನ್ನು ಕಾಣಬಹುದು. ದೇವಿ ಅಖಿಲಾಂಡೇಶ್ವರಿ ಬಹಳ ಕೋಪದಲ್ಲಿದ್ದಳಂತೆ, ಅದಕ್ಕಾಗಿ ಆದಿಶಂಕರರು ಅವಳ ಎದುರು ಗಣಪತಿ ಮತ್ತು ಶ್ರೀಚಕ್ರವನ್ನು ಪ್ರತಿಷ್ಠಾಪನೆ ಮಾಡಿ ಅವಳನ್ನು ಶಾಂತಗೊಳಿಸಿದರು. ಶಿವನ ಒಂದು ಅಂಶವಾದ ಏಕಪಾದತ್ರಿಮೂರ್ತಿಯ ಶಿಲ್ಪವು ಈ ದೇವಾಲಯದಲ್ಲಿದೆ.

11 ಮತ್ತು 12ನೆಯ ಶತಮಾನದಲ್ಲಿ ಚೋಳರು ಈ ದೇವಾಲಯಕ್ಕೆ ಕೊಟ್ಟಿರುವ ದತ್ತಿಗಳನ್ನು ಇಲ್ಲಿನ ಶಾಸನಗಳು ಹೇಳುತ್ತವೆ. ಹೊಯ್ಸಳರ ದೊರೆ ವೀರನರಸಿಂಹನ ಮಗ ಸೋಮೇಶ್ವರನು 1230 ರಿಂದ 1237ರಅವಧಿಯಲ್ಲಿ ಈ ದೇವಾಲಯವನ್ನು ವಿಸ್ತರಿಸಿ ಅದಕ್ಕೆ ಹೊಸ ರೂಪವನ್ನು ಕೊಟ್ಟನು. ತನ್ನ ಅಜ್ಜಿ, ತಾತ ಮತ್ತು ತಾಯಿಯ ಹೆಸರಿನಲ್ಲಿ ಆತ ಹೊಸದೇವಾಲಯವನ್ನು ನಿರ್ಮಿಸಿದ್ದಾನೆ.

ಪವಿತ್ರ ಐದು ಶಿವ ದೇವಾಲಯಗಳಲ್ಲಿ ನಾಲ್ಕು ಶಿವ ದೇವಾಲಯಗಳು ತಮಿಳುನಾಡಿನಲ್ಲಿವೆ. ಒಂದು ಮಾತ್ರ ಆಂಧ್ರಪ್ರದೇಶದಲ್ಲಿದೆ.

ಅಖಿಲಾಂಡೇಶ್ವರಿಯ ರೂಪದಲ್ಲಿ ಪಾರ್ವತಿಯು ಶಿವನಿಗೆ ಪೂಜೆ ಮಾಡಿದ ಕಾರಣ ಅರ್ಚಕರು ಸ್ತ್ರೀವೇಷದಲ್ಲಿ ಶಿವನಿಗೆ ಮತ್ತು ಹಸುವಿಗೆ ಪೂಜೆ ಸಲ್ಲಿಸುತ್ತಾರೆ. ವಾಸ್ತುಶಿಲ್ಪದ ದೃಷ್ಟಿಯಿಂದಲೂ ಜಂಬುಕೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾದ ಮತ್ತು ನೋಡಲೇಬೇಕಾದ ದೇವಾಲಯವಾಗಿದೆ.

### ತಂಜಾವೂರಿನ ಬೃಹದೀಶ್ವರ ದೇವಾಲಯ



ತಂಜಾವೂರು ತಿರುಚಿರಾಪಳ್ಳಿಯಿಂದ 65ಕಿ.ಮೀ. ದೂರದಲ್ಲಿದೆ. ಇದನ್ನು ಭತ್ತ ಬೆಳೆಯುವ ಕೇಂದ್ರವೆಂದು ಕರೆಯಲಾಗಿದೆ. ಭಾರತದ ಅತಿದೊಡ್ಡ ದೇವಾಲಯಗಳಲ್ಲೊಂದಾಗಿರುವ ಬೃಹದೀಶ್ವರ ದೇವಾಲಯವನ್ನು ತಮಿಳಿನಲ್ಲಿ 'ಪೆರುಕಡೈಯರ್ ಕೋವಿಲ್' ಎಂದು ಕರೆಯಲಾಗುತ್ತದೆ. ಈ ದೇವಾಲಯದ ಮುಖ್ಯ ಸೊಗಸು ಬೃಹತ್ ಶಿವಲಿಂಗ ಮತ್ತು ನಂದಿ.

ಕ್ರಿ. ಶ. 1010ರಲ್ಲಿ ಚೋಳ ಸಾಮ್ರಾಟ ರಾಜರಾಜ ಚೋಳನು ಬೃಹದೀಶ್ವರದೇವಾಲಯವನ್ನು ನಿರ್ಮಿಸಿದನು. ಚೋಳರ ದೊರೆ ಅರುಲಮೊಳವವರ್ಮನ್ ಈ ದೇವಾಲಯಕ್ಕೆ ಅಸ್ತಿಭಾರ ಹಾಕಿದ್ದನು. ಮೂರು ಜೀವಂತ ಚೋಳ ದೇವಾಲಯಗಳಲ್ಲಿ ಇದಕ್ಕೆ ಅಗ್ರಸ್ಥಾನವಿದೆ. ಈ ದೇವಾಲಯವು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ಶಿವನ ಎದುರು ಸ್ಥಾಪಿತವಾದ 13 ಅಡಿ ಎತ್ತರವಿರುವ 16 ಅಡಿ ಸುತ್ತಳತೆಯ ನಂದಿ ವಿಗ್ರಹ ಅತ್ಯಂತ ಆಕರ್ಷಕವಾಗಿದೆ. ಇದನ್ನು ಏಕಶಿಲೆಯಿಂದ ನಿರ್ಮಿಸಲಾಗಿದೆ. ತಂಜಾವೂರಿನ ಬೃಹದೀಶ್ವರ ದೇವಾಲಯದ ರಾಜಗೋಪುರವು ವಿಶ್ವ ಪ್ರಸಿದ್ಧವಾದದ್ದು. 216 ಅಡಿ ಎತ್ತರವಿರುವ ಈ ರಾಜಗೋಪುರ ವಿಶ್ವಖ್ಯಾತಿಯನ್ನು ಪಡೆದಿದೆ. ಈ ದೇವಾಲಯ ನಿರ್ಮಾಣದಲ್ಲಿ ಒಂದರ ಮೇಲೊಂದು ಕಲ್ಲುಗಳನ್ನು ಪೇರಿಸಿ ದೇವಾಲಯವನ್ನು ನಿರ್ಮಿಸಿದ್ದಾರೆ. ಗಾರೆಯನ್ನು ಬಳಸಿಲ್ಲ. ಗರ್ಭಗುಡಿಯ ಮೇಲಿನ ಕಲ್ಲಿನ ತೂಕ 80ಟನ್. ಈ ದೇವಾಲಯದ ನಿರ್ಮಾಣಕ್ಕೆ ಏಳು ವರ್ಷಗಳನ್ನು ತೆಗೆದುಕೊಂಡಿದ್ದಾರೆ.

ರಾಜರಾಜ ಚೋಳನ ಕನಸಿನಲ್ಲಿ ಪರಶಿವನು ಕಾಣಿಸಿಕೊಂಡು ಈ ದೇವಾಲಯವನ್ನು ನಿರ್ಮಿಸುವಂತೆ ಆದೇಶಿಸಿದನಂತೆ! ರಾಜರಾಜ ಚೋಳ (ಕ್ರಿ.ಶ. 985ರಿಂದ 1010) ತನ್ನ ಆಳ್ವಿಕೆಯ 25ನೆಯ ವರ್ಷದ ನೆನಪಿಗಾಗಿ ಈ ದೇವಾಲಯವನ್ನು ನಿರ್ಮಿಸಿದ್ದಾನೆ. ದೇವಸ್ಥಾನದ ಪರಿಸರದಲ್ಲಿ ರಾಜಪರಿವಾರ ವಾಸವಾಗಿತ್ತು. ಅವರ ರಕ್ಷಣೆಗೆ ಬೇಕಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಆ ಮೂಲಭೂತ ವ್ಯವಸ್ಥೆಗಳ ಕುರುಹುಗಳನ್ನು ಇಂದೂ ಇಲ್ಲಿ ನೋಡಬಹುದು.

ಗರ್ಭಗುಡಿಯ ಪ್ರವೇಶದ್ವಾರವು ಅತ್ಯಂತ ಸುಂದರವಾಗಿ ಅಲಂಕೃತವಾಗಿದೆ. ಗರ್ಭಗುಡಿಯಲ್ಲಿರುವ ಶಿವಲಿಂಗಮೂರ್ತಿ 29ಅಡಿ ಎತ್ತರವಿದೆ. ಏಕಶಿಲೆಯಿಂದ ನಿರ್ಮಿತವಾದ ಈ ಶಿವಲಿಂಗವು ಭಾರತದಲ್ಲಿ ಅತ್ಯಂತ ದೊಡ್ಡದಾದ ಶಿವಲಿಂಗವೆಂಬ ಖ್ಯಾತಿಯನ್ನು ಪಡೆದಿದೆ. ದೇಗುಲದಲ್ಲಿ ಗಣಪತಿಯ ವಿಗ್ರಹವಿದೆ, ಈಶ್ವರನ ಜೊತೆ ಆರು ಅಡಿ ಎತ್ತರದ ಅಷ್ಟದಿಕ್ಪಾಲಕರ ವಿಗ್ರಹಗಳಿವೆ. ಈ ದೇವಸ್ಥಾನ ಚೋಳ ಸಾಮ್ರಾಜ್ಯದ ಅದ್ಭುತ ಹಾಗೂ ವೈಭವಪೂರ್ಣ ಶಿಲ್ಪಕಲಾಶೈಲಿಗೆ ಸಾಕ್ಷಿಯಾಗಿದೆ.

ಒಂದು ಅಕ್ಷೀಯ ಮತ್ತು ಸುಸಾಂಗತ್ಯಯುಳ್ಳ



ರೇಖಾಗಣಿತದ ಆಧಾರದ ಮೇಲೆ ಈ ದೇವಾಲಯ ನಿರ್ಮಿತವಾಗಿದೆ. ತಮಿಳುನಾಡಿನ ಚೋಳಸಾಮ್ರಾಜ್ಯದ ದೊರೆಗಳ ಸಂಪತ್ತು, ಅಧಿಕಾರ ಹಾಗೂ ಕಲಾತ್ಮಕ ಅಭಿವ್ಯಕ್ತಿಗೆ ಈ ದೇವಸ್ಥಾನ ಉದಾಹರಣೆಯಂತಿದೆ.

ತಮಿಳುನಾಡಿನ ಚೋಳ ಸಾಮ್ರಾಟರು ಈ ದೇವಾಲಯದ ನಿರ್ವಹಣೆಗಾಗಿ 600 ಸಿಬ್ಬಂದಿಗಳನ್ನು ನೇಮಕ ಮಾಡಿದ್ದರು. ಅವರಿಗೆ ವೇತನ ಮತ್ತು ಇತರೆ ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ದೇವರಿಗೆ ಅರ್ಚನೆಯ ಜೊತೆಗೆ ಸಂಗೀತ, ನಾಟಕ, ನೃತ್ಯಸೇವೆ ಹಾಗೂ ಶಿವಪುರಾಣಗಳ ವಾಚನಗಳು ಪ್ರತಿನಿತ್ಯ ಸಲ್ಲುತ್ತಿತ್ತು.

ದೇವಾಲಯದಲ್ಲಿ ಧಾರ್ಮಿಕ ಚಟುವಟಿಕೆಗಳ ಜೊತೆ ಶೈಕ್ಷಣಿಕ ಚಟುವಟಿಕೆಗಳೂ ನಡೆಯುತ್ತಿದ್ದವು. ಇದೊಂದು ಶೈಕ್ಷಣಿಕ ಅಗ್ರಹಾರವಾಗಿ ಸಹ ಮಾನ್ಯತೆ ಪಡೆದಿತ್ತು. ಇಲ್ಲಿ ವೇದಾಭ್ಯಾಸ ನಿರಂತರವಾಗಿ ನಡೆಯುತ್ತಿತ್ತು. ವ್ಯಾಪಾರಗಳ ಚಟುವಟಿಕೆಯಿಂದಾಗಿ ವಾಣಿಜ್ಯ ಕೇಂದ್ರವಾಗಿಯೂ ಇದು ಪ್ರಸಿದ್ಧವಾಗಿತ್ತು. ಹೂವು, ಹಾಲು, ತೈಲ, ತುಪ್ಪ, ದಿನಸಿಗಳ ವ್ಯಾಪಾರ – ಹೀಗೆ ಅನೇಕ ವಾಣಿಜ್ಯ ಚಟುವಟಿಕೆಗಳ ಕೇಂದ್ರವು ಈ ದೇವಸ್ಥಾನವೇ ಆಗಿತ್ತು. ಈ ದೇವಸ್ಥಾನದ ಆಡಳಿತವನ್ನು ತಿಳಿಸುವ ಅನೇಕ ಶಾಸನಗಳು ಈ ದೇವಸ್ಥಾನದಲ್ಲಿಯೇ ಕಾಣಬರುತ್ತದೆ. ಅನೇಕ ವಿದೇಶೀಯರು ಈ ದೇವಸ್ಥಾನಕ್ಕೆ ಪ್ರಾಚೀನ ಕಾಲದಲ್ಲಿಯೇ ಭೇಟಿಕೊಟ್ಟಿದ್ದಾರೆ.

ದೇವಸ್ಥಾನದ ರಾಜಗೋಪುರದಿಂದ ನಗರವೀಕ್ಷಣೆ ಮಾಡುವ ವ್ಯವಸ್ಥೆಯು ಕೂಡ ಇತ್ತು. ಗೋಪುರದ ತುತ್ತತುದಿಯಲ್ಲಿ ಅಷ್ಟಕೋನದಲ್ಲಿರುವ ಒಂದೇ ಕಲ್ಲಿನ ಕೆತ್ತನೆಯನ್ನು ನೋಡಬಹುದು.

2010 ಸೆಪ್ಟೆಂಬರ್ 26ರಂದು ಭಾರತ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ತಂಜಾವೂರಿನ ಬೃಹದೀಶ್ವರದೇವಾಲಯದ ನಿರ್ಮಾಣವಾಗಿ ಸಾವಿರ ವರ್ಷ ಕಳೆದ ಸವಿನೆನಪಿಗಾಗಿ 'ಭರತನಾಟ್ಯಯಜ್ಞ' ಎನ್ನುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಡಾ. ಪದ್ಮಾಸುಬ್ರಹ್ಮಣ್ಯಂ ನೇತೃತ್ವದಲ್ಲಿ ಸಾವಿರ ಕಲಾವಿದರು ಭಾಗವಹಿಸಿ ಈಶ್ವರನಿಗೆ ನೃತ್ಯಸೇವೆಯನ್ನು ಸಮರ್ಪಿಸಿದರು.

ಭಾರತ ಸರ್ಕಾರವು ಇದರ ಅಂಗವಾಗಿ ಅಂಚೆ ಚೀಟಿಯೊಂದನ್ನು ಹೊರತಂದಿತು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇದೇ ಸಂದರ್ಭದಲ್ಲಿ ದೇವಾಲಯದ ಐದು ರೂಪಾಯಿಯ ನಾಣ್ಯವನ್ನು ಬಿಡುಗಡೆ ಮಾಡಿತು. 1954ರ ಏಪ್ರಿಲ್ 1ರಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತಂಜಾವೂರಿನ ಬೃಹದೀಶ್ವರ ದೇವಾಲಯದ ರೇಖಾಚಿತ್ರವುಳ್ಳ ಸಾವಿರ ರೂ.ಗಳ ನೋಟನ್ನು ಕೂಡ ಬಿಡುಗಡೆ ಮಾಡಿತ್ತು.

ವಿಶ್ವಸಂಸ್ಥೆಯ ಯುನೆಸ್ಕೋ ದಾಖಲೆಯಲ್ಲಿ 'ಗ್ರೇಟ್ ಲಿವಿಂಗ್ ಚೋಳ ಟೆಂಪಲ್ಸ್' ಎಂದು ಇದರ ಬಗ್ಗೆ ವಿವರವಿದೆ. ಮಹಾಶಿವರಾತ್ರಿ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳು ಹಗಲುರಾತ್ರಿ ನಡೆಯುತ್ತವೆ. ಈ ದೇವಾಲಯವು 44.7 ಎಕರೆಯಲ್ಲಿದೆ. 16ನೆಯ ಶತಮಾನದಲ್ಲಿ ಈ ದೇವಾಲಯದ ಪ್ರಾಕಾರವನ್ನು ಕೋಟೆಯ ರೀತಿಯಲ್ಲಿ ನಿರ್ಮಿಸಲಾಯಿತು. ಶಿವಭಕ್ತರ ಮಹತ್ವವನ್ನು ಸಾರುವ ಅನೇಕ ಮಂಟಪಗಳು ಮತ್ತು ಶಿಲ್ಪಗಳನ್ನು ಇಲ್ಲಿ ಕಾಣಬಹುದು. ಭಾರತದ ವಾಸ್ತುಶಿಲ್ಪದ ದೃಷ್ಟಿಯಿಂದ ತಂಜಾವೂರಿನ ಬೃಹದೀಶ್ವರ ದೇವಾಲಯಕ್ಕೆ ವಿಶೇಷವಾದ ಮಹತ್ತ್ವವಿದೆ.

**■ ನಿರೂಪಣೆ: ಶ್ರೀವತ್ಸ**

---

# ಶ್ರೀದುರ್ಗಾಂಬಿಕಾದೇವಿಯ ಐದನೆಯ ವರ್ಷದ ವರ್ಧಂತಿ

ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಫೆಬ್ರುವರಿ 4ರಂದು ಸಂಭ್ರಮದ ದಿನವಾಗಿತ್ತು. ಅಂದು ಶ್ರೀದುರ್ಗಾಂಬಿಕಾ ದೇವಿಯ 5ನೇ ವಾರ್ಷಿಕೋತ್ಸವದ ಅಂಗವಾಗಿ ಶತಚಂಡಿಕಾ ಹೋಮವನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ತಿಂಗಳು 2 ಮತ್ತು 3ರಂದು ಗಣಪತಿ ಹೋಮ, ಚಂಡಿಕಾಪಾರಾಯಣ, ಆಶ್ಲೇಷ ಬಲಿ ಹಾಗೂ ರುದ್ರ ಹೋಮಗಳು ಸಾಂಗೋಪಾಂಗವಾಗಿ ಜರುಗಿದವು. ಈ ಎಲ್ಲಾ ಧಾರ್ಮಿಕ ಕಾರ್ಯಗಳು ಮಂಜೇಶ್ವರದ ಅನಂತೇಶ್ವರ ದೇವಾಲಯದ ಮುಖ್ಯ ಅರ್ಚಕರಾಗಿರುವ ವೇದಜ್ಞ ಶ್ರೀತ್ರಿವಿಕ್ರಮಭಟ್ಟರ ಮಾರ್ಗದರ್ಶನದಲ್ಲಿ ಜರುಗಿತು. ಇದರಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು. ವಿವಿಧ ಕೋರ್ಸುಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶ್ರದ್ಧಾಭಕ್ತಿಯಿಂದ ಶ್ರೀದುರ್ಗಾಂಬಿಕಾದೇವಿಯ ಪೂಜಾಕಾರ್ಯಗಳಲ್ಲಿ ಭಾಗವಹಿಸಿ ಶ್ರೀದೇವಿಯ ಆಶೀರ್ವಾದಕ್ಕೆ ಪಾತ್ರರಾದರು. ಸಾರ್ವಜನಿಕರು ಸಹ



ಅಪಾರಸಂಖ್ಯೆಯಲ್ಲಿ ನೆರೆದಿದ್ದರು.

ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಮಾತನಾಡುತ್ತಾ "ಹೋಮದ ಮೂಲಕ ದೇವಿಯ ತೃಪ್ತಿಗೆ ಹವಿಸ್ಸನ್ನು ಅರ್ಪಿಸಿದ್ದೇವೆ. ದೇಹವನ್ನೇ ಯಜ್ಞಕುಂಡವನ್ನಾಗಿ ಮಾಡಿಕೊಂಡು ಅರಿಷಡ್ವರ್ಗಗಳನ್ನು ದಹಿಸಿ ಆ ಮೂಲಕ ದೇವಿಯ ಪ್ರಾರ್ಥನೆ ಮಾಡಿದರೆ ಆ ಭಕ್ತ ದೇವಿಗೆ ಮತ್ತಷ್ಟು ಹತ್ತಿರವಾಗುತ್ತಾನೆ. ವ್ಯಕ್ತಿ ತನ್ನನ್ನು ತಾನು ಉತ್ತಮವಾಗಿಸಿಕೊಳ್ಳುವ ಪಕ್ರಿಯೆಯನ್ನು ಪ್ರತಿದಿನ ನಾವೆಲ್ಲರೂ ಮಾಡಬೇಕು. ಅದಕ್ಕಾಗಿ ಇಂದು ಶ್ರೀದುರ್ಗಾಂಬಿಕಾದೇವಿಗೆ ಶತಚಂಡಿಕಾಹೋಮದ ಮೂಲಕ ದೇವಿಯಲ್ಲಿ ಪ್ರತಿಜ್ಞೆ ಸಲ್ಲಿಸಿದ್ದೇವೆ. ದೇವಿಯ ಅನುಗ್ರಹ ಎಲ್ಲರ ಮೇಲೂ ಆಗಿರುವುದು ಸಂತೋಷದ ವಿಚಾರ" ಎಂದರು.

ಶತಚಂಡಿಯಹೋಮದಲ್ಲಿ ಹಿರಿಯರಾದ ಷಣ್ಮುಖಾಪ್ಪಾಜಿ, ಶ್ರೀಮತಿಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ.ರಮಣ್ ಹುಲಿನಾಯ್ಕರ್, ಡಾ.ಲಾವಣ್ಯ ರಮಣ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಎಂ.ಎಸ್.ಪಾಟೀಲ್ ಹಾಗೂ ಮರಿಸ್ವಾಮಿ ಮೊದಲಾದವರು ಭಾಗವಹಿಸಿದ್ದರು.

ವಿಶೇಷ ಅತಿಥಿಗಳಾಗಿ ಪ್ರಜಾಪ್ರಗತಿಯ ಸಂಪಾದಕರಾದ ಎಸ್.ನಾಗಣ್ಣ, ಕೋಲಾರದ ಮಹಿಳಾ ಎಜ್ಯುಕೇಷನ್ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷರಾಗಿರುವ ಡಾ.ಕೆ.ಆರ್.ಪಿಳ್ಳಪ್ಪ, ಅವರ ಮಡದಿ ಶ್ರೀಮತಿ ರೂಪ ಪಿಳ್ಳಪ್ಪ, ಆಡಿಟರ್ ಆನಂದ ರಾಮಚಂದ್ರ, ಯುವನಾಯಕ ಮಧುಕರ್ ನಾಗಣ್ಣ, ಕುವೆಂಪು ಭಾಷಾ ಭಾರತಿಯ ಅಧಿಕೃತ ಅನುವಾದಕರಾದ ವಿ. ಕೃಷ್ಣ, ಗಣಕ ಪರಿಷತ್ತಿನ ಕಾರ್ಯದರ್ಶಿ ನರಸಿಂಹಮೂರ್ತಿ, ಪತ್ರಕರ್ತರಾದ ರಾಜಮನ್ನಾರ್, ಲೇಖಕಿ ಶ್ರೀಮತಿಎನ್.ಭಾರತಿ, ಶ್ರೀಮತಿ ರೂಪ ಮೊದಲಾದವರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

**■ ವರದಿ: ಶ್ರೀವತ್ಸ**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**